(ಗೊಂದಲ)

ಅಧ್ಯಕ್ಷರು: ನಿಲುವಳಿ ಸೂಚನೆಯನ್ನು ನೀವು ತೆಗೆದುಕೊಂಡು ಬಂದಿದ್ದೀರಿ. ಅದಕ್ಕೆ ತಾವು ಏಕೆ ಸಹಿ ಮಾಡಿದಿರಿ?

(ಗೊಂದಲ)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಅವರು ಚರ್ಚೆ ಮಾಡುವುದಾದರೆ, ರಾತ್ರಿಯೆಲ್ಲಾ ಚರ್ಚೆ ಮಾಡಲಿ. ಅದಕ್ಕೆ ನಾವು ರೆಡಿ ಇದ್ದೇವೆ.

(ಗೊಂದಲ)

ಅಧ್ಯಕ್ಷರು: ಎಲ್ಲರೂ ಪರಸ್ಪರ ಮಾತನಾಡಬೇಡಿ. ದಯವಿಟ್ಟು ಕುಳಿತುಕೊಳ್ಳಿ. ಕಂದಾಯ ಇಲಾಖೆ ಬಿಲ್ ಅನ್ನು ಸೋಮವಾರ ತೆಗೆದುಕೊಳ್ಳೋಣ.

4. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ (ತಿದ್ದುಪಡಿ) ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸಚಿವರು): ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೆ, ಈಗ ಬೆಂಗಳೂರಿನಲ್ಲಿ ಏನಾಗಿದೆ ಎಂದರೆ, ತೊರೆಕಾರನಹಳ್ಳಿಯಿಂದ ಮತ್ತು ತಿಪ್ಪಗೊಂಡನಹಳ್ಳಿಯಿಂದ ಎರಡೂ ಸೇರಿ ನಮಗೆ 850 mld ನೀರನ್ನು ನಾವು ಸರಬರಾಜು ಮಾಡಿಕೊಳ್ಳುತ್ತಿದ್ದೇವೆ. ಆದರೆ ನಮ್ಮ ಬೇಡಿಕೆ ಇರುವುದು 1250 mld ನೀರು ಬೇಕಾಗಿದೆ. ನೀರಿನ ಅಭಾವವಿದೆ. ಬೆಂಗಳೂರಿನಲ್ಲಿ ಸುಮಾರು 10 ಸಾವಿರ ಬೋರ್‌ವೆಲ್‌ಗಳನ್ನು ನಾವು ಕೊರೆದಿದ್ದೇವೆ. ಈಗ ದಿನೇ ದಿನೇ ಮನೆಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಆದರೆ ನೀರಿನ ಅವಶ್ಯಕತೆಯನ್ನು ಪೂರೈಸುವುದಕ್ಕೆ ನಮಗೆ ಆಗುತ್ತಿಲ್ಲ. 24 ಗಂಟೆ ಪಂಪ್ ಮಾಡಿದರೂ ಕೂಡ, ನೀರನ್ನು ಸಮರ್ಪಕವಾಗಿ ಪೂರೈಸಲಿಕ್ಕೆ ಆಗುತ್ತಿಲ್ಲ. CMC, TMC, 110 ಗ್ರಾಮಗಳು ಎಲ್ಲವೂ ಸೇರಿ, ಮೊದಲು 250 ಚದುರ ಕಿಲೋಮೀಟರ್ ಇದ್ದದ್ದು ಇವತ್ತು

800 ಚದುರ ಕಿಲೋಮೀಟರ್‌ಗೆ ವಿಸ್ತೀರ್ಣವಾಗಿದೆ. ಕಾವೇರಿ ಟ್ರಿಬ್ಯೂನಲ್ ಪ್ರಕಾರ ನಮಗೆ ಇನ್ನೂ 500 mld ನೀರು ಮಾತ್ರ ಬರುತ್ತದೆ. ಅದು ಬಂದರೂ ಕೂಡ ನಮಗೆ ಸಾಕಾಗುವುದಿಲ್ಲ. ಅಷ್ಟರೊಳಗೆ ಬೇಡಿಕೆ ಇನ್ನೂ ಜಾಸ್ತಿಯಾಗಿರುತ್ತದೆ. ಆದಕಾರಣ ನಾವು ಏನು ಯೋಚನೆ ಮಾಡಿದ್ದೇವೆ ಎಂದರೆ, ಈಗಾಗಲೇ ಚೆನ್ನೈನಲ್ಲಿ ಮಾಡಿರುವಂತೆ ಏನು ಮಳೆ ನೀರು ಬರುತ್ತದೆ, ಅದನ್ನು ಸಂಗ್ರಹ ಮಾಡಿ, ಇಂಗುವ ಹಾಗೆ ಮಾಡಿ, ಬೋರ್‌ವೆಲ್‌ಗಳಿಗೆ ತುಂಬಿಸುವುದು ಮತ್ತು ಮಳೆ ಕೊಯ್ಲು ಪದ್ಧತಿಗಾಗಿ ನಾವು ಸಣ್ಣ ಸಣ್ಣ ಬಾವಿಗಳನ್ನು ಮಾಡಿ, ಸುತ್ತಲೂ boarders, ಅದಕ್ಕೆ ಪೂರ್ತಿ ಮರಳನ್ನು ಮೇಲ್ಗಡೆ ಹಾಕಿ, ಅದರ ಮುಚ್ಚಳ ಹಾಕಿ ನೀರು ತುಂಬಿಸುವಂತಾದ್ದು, ಅಂತರ್ಜಲ ಮಟ್ಟವನ್ನು ಏರಿಸುವಂತಾದ್ದು ಮತ್ತು ನಮ್ಮ ನೆಲದ ಗುಣಮಟ್ಟವನ್ನು ಸುಧಾರಣೆ ಮಾಡುವಂತಾದ್ದು, ಈ ಎಲ್ಲವನ್ನೂ ಕೂಡ ದೃಷ್ಟಿಯಲ್ಲಿಟ್ಟುಕೊಂಡು ಈ ಮಳೆ ಕೊಯ್ಲು ಪದ್ಧತಿಯನ್ನು ಇವತ್ತು ಕಡ್ಡಾಯ ಮಾಡಲು ಈ ಬಿಲ್ ತರಲಾಗಿದೆ. ಇದುವರೆಗೂ ಇದನ್ನು ಕಡ್ಡಾಯ ಮಾಡುವಂತಹ ಕಾನೂನು ಇರಲಿಲ್ಲ. ಕೇವಲ ಮಹಾನಗರ ಪಾಲಿಕೆಯಲ್ಲಿ ಒಂದು circular ಇತ್ತು ಅಷ್ಟೆ. ಇದಕ್ಕೊಂದು ಕಾನೂನು ಇರಲಿಲ್ಲ. ಈ ಒಂದು ಕಾನೂನನ್ನು ಮಾಡಿಕೊಂಡು, ಇದನ್ನು ನಾವು ಕಡ್ಡಾಯಗೊಳಿಸಬೇಕು ಎಂದು ನಮ್ಮ ಸರ್ಕಾರದ ಚಿಂತನೆ ಇದೆ. ಯಾರಾದರೂ ಇದನ್ನು ನಾವು ಮಾಡುವುದಿಲ್ಲ ಎಂದು ಹೇಳಬಹುದು. ಇದನ್ನು 30 x 40 ಸೈಟ್‌ನಲ್ಲಿ ಮಾಡಬೇಕಾದರೆ, ಅದಕ್ಕೆ 10–15 ಸಾವಿರ ರೂ.ಗಳು ಖರ್ಚಾಗುತ್ತದೆ. ಸರ್ಕಾರದ ವತಿಯಿಂದ ಅದನ್ನು ನಾವೇ ಮಾಡಿಸಿ, ವಸೂಲಿ ಮಾಡಬೇಕೆನ್ನುವ ಉದ್ದೇಶ ಸರ್ಕಾರದ್ದಾಗಿದೆ. ಈ ಮಳೆ ಕೊಯ್ಲು ಪದ್ಧತಿಯನ್ನು ತರದಿದ್ದರೆ ಇನ್ನೂ ಹೆಚ್ಚು ತೊಂದರೆಯಾಗುತ್ತದೆ. ಈಗೇನು ಬೇಸಿಗೆಯಲ್ಲಿ ಉಷ್ಣಾಂಶ ಜಾಸ್ತಿಯಾಗಿದೆ, ಅದನ್ನು ತಂಪು ಮಾಡಲಿಕ್ಕೆ ಮೇಲ್ಮಟ್ಟದ ಭೂಮಿಯನ್ನು ತೊರೆಯದೇ ಇರುವುದಕ್ಕೆ, ಅಲ್ಲಲ್ಲಿ ಪಾರ್ಕ್‌ಗಳಲ್ಲಿ, ರಸ್ತೆಗಳಲ್ಲಿ, ದೊಡ್ಡ ದೊಡ್ಡ ಮನೆಗಳಲ್ಲಿ, ಸರ್ಕಾರಿ ಕಛೇರಿಗಳಲ್ಲಿ ಎಲ್ಲಾ ಭಾಗದಲ್ಲೂ ಕೂಡ ನಾವು ಮಾಡಬೇಕೆಂಬ ಉದ್ದೇಶದಿಂದ ಈ ಬಿಲ್ ಅನ್ನು ತಂದಿದ್ದೇವೆ. ದಯವಿಟ್ಟು ಇದನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಳೆ ಕೊಯ್ಲು ಮೂಲಕ ಮಳೆ ನೀರನ್ನು ಶೇಖರಣೆ ಮಾಡಬೇಕು ಎಂಬ ಬಗ್ಗೆ

ಜನರಿಗೆ ಪ್ರಜ್ಞೆ ಮೂಡಿಸತಕ್ಕದ್ದು ಬಹಳ ಒಳ್ಳೆಯ ಕೆಲಸ. ಈಗ 30 x 40 ಚದುರ ಅಡಿಯಲ್ಲಿ ಮನೆಯನ್ನೇನು ಕಟ್ಟಿಕೊಂಡಿದ್ದಾರೆ, ಅವರು ಮತ್ತು ಅದಕ್ಕಿಂತ ಮೇಲಿನ ವಿಸ್ತೀರ್ಣ ಇರತಕ್ಕಂಥ ಮನೆಗಳವರೆಲ್ಲಾ ಕಡ್ಡಾಯವಾಗಿ ಮಳೆ ಕೊಯ್ಲು ನೀರನ್ನು ಶೇಖರಣೆ ಮಾಡಿಕೊಳ್ಳಬೇಕೆಂದು ಮಾಡಲಿಕ್ಕೆ ಹೊರಟಿದ್ದೀರಿ. ಕುಡಿಯುವ ನೀರಿನ ತೊಂದರೆ ಇದೆ, ಎಲ್ಲಾ ಕಡೆ ನೀರು ಕೊಡಲಿಕ್ಕಾಗಿಲ್ಲ. ಈಗೆಲ್ಲಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾಡಿರುವುದರಿಂದ, ಇನ್ನೂ ಕೂಡ ಕುಡಿಯುವ ನೀರಿನ ಸಮಸ್ಯೆ ದೊಡ್ಡದಾಗಿದೆ. ಎಲ್ಲಾ ಕಡೆ ನೀರನ್ನು ಕೊಡಲಿಕ್ಕಾಗುತ್ತಿಲ್ಲ, ಇದೊಂದು ದೊಡ್ಡ ಸಮಸ್ಯೆಯಾಗಿದೆ. ಮಳೆ ಕೊಯ್ಲು ನೀರಿನ ಪದ್ಧತಿ ಜಾರಿಗೆ ತರಲೇಬೇಕು. ಆದರೆ, before that ನೀವು ಇದನ್ನು compulsory ಮಾಡುತ್ತಿರುವುದರಿಂದ, penal clause introduce ಮಾಡುತ್ತಿರುವುದರಿಂದ, ಎಲ್ಲಾ ಕಡೆ, ಬೆಂಗಳೂರು ನಗರದಲ್ಲಿ ಮತ್ತು ಎಲ್ಲೆಲ್ಲಿ ನೀವು ಮಾಡುತ್ತೀರಿ, ಎಲ್ಲಾ ಕಡೆಗಳಲ್ಲಿ ಜಾಗೃತಿ ಬರುವ ರೀತಿಯಲ್ಲಿ ಆಂದೋಲನ ಮಾಡಬೇಕು. ಎಲ್ಲಾ ಜನರಿಗೂ ಈ ಬಗ್ಗೆ ಜಾಗೃತಿ ಮೂಡಬೇಕು. ಆ ರೀತಿ ಮಾಡಬೇಕು. ಆನಂತರವೇ ಇದನ್ನು compulsory ಆಗಿ ಮಾಡುವುದರ ಬಗ್ಗೆ ಯೋಚನೆ ಮಾಡಬೇಕು. ಅದೇನನ್ನೂ ಮಾಡದೆ, act pass ಆದ ಮೇಲೆ 9 ತಿಂಗಳೊಳಗೆ ಮಾಡಬೇಕೆಂದು ಹೇಳಿದ್ದೀರಿ. ಅದನ್ನು ನೀವು ಮಾಡದಿದ್ದರೆ ಮಂಡಳಿಯವರೇ ಮಾಡುತ್ತೇವೆ, ಅದಕ್ಕೆ ತಗಲುವಂತಹ ಖರ್ಚನ್ನು ವಸೂಲಿ ಮಾಡಿಕೊಳ್ಳುತ್ತೇವೆಂದು ಮಾಡಿದ್ದೀರಿ. ವಸೂಲಿ ಮಾಡಿಕೊಳ್ಳುವುದಷ್ಟೇ ಇಟ್ಟುಕೊಳ್ಳಿ, ಅದನ್ನು ಬಿಟ್ಟು ಬೇರೆದೆಲ್ಲಾ ಬೇಡ. Land Revenue ರೀತಿ ವಸೂಲಿ ಮಾಡುತ್ತೇವೆ ಎನ್ನುವುದು ಬೇಡ. ಮೊದಲಿಗೆ ನೀವು ಜನರಲ್ಲಿ ಜಾಗೃತಿ ಮೂಡಿಸತಕ್ಕ ಕೆಲಸ ಮಾಡಬೇಕು.

ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ): ಮಾನ್ಯ ಅಧ್ಯಕ್ಷರೆ, ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಒಳ್ಳೆಯ ವಿಚಾರವೊಂದನ್ನು ಪ್ರಸ್ತಾಪ ಮಾಡಿದ್ದಾರೆ. ಚೆನ್ನೈ ನಗರದಲ್ಲಿ ಇದನ್ನು ಕಡ್ಡಾಯ ಮಾಡಿದ್ದಾರೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ಒಂದು ಇದರಲ್ಲಿ ನೋಡಬೇಕಾಗಿರತಕ್ಕಂಥದ್ದು ಏನೆಂದರೆ, ಮಳೆ ನೀರನ್ನು ಸಂಗ್ರಹಣೆ ಮಾಡತಕ್ಕಂಥದ್ದು ಅತ್ಯವಶ್ಯಕ. ಅದರ ಬಗ್ಗೆ ಯಾರೂ ಕೂಡ ವಾದ ಮಾಡತಕ್ಕಂಥದ್ದು ಉದ್ಭವವೇ ಆಗುವುದಿಲ್ಲ. ಆದರೆ ಇದನ್ನು ನಾವು ಬೆಂಗಳೂರು ಜಲ ಮಂಡಳಿ ಮುಖಾಂತರ ಮಾಡಲಿಕ್ಕಾಗುತ್ತದೆಯೇ? ಏಕೆಂದರೆ, ಇದನ್ನು ನೀವು ಕೇವಲ ಹಳೆಯ

ಕಟ್ಟಡಗಳಿಗೆ ಮಾತ್ರ ಮಾಡುತ್ತಿಲ್ಲ. ಇದನ್ನು ಹೇಗೆ ಮಾಡಬೇಕು ಎನ್ನುವುದಕ್ಕೆ ನನ್ನ ಸಲಹೆ ಏನೆಂದರೆ, Karnataka Municipality Act ಅನ್ನು amend ಮಾಡಿ, ಯಾವುದಾದರೂ plan sanction ಮಾಡಿದಾಗ, ಇದನ್ನು ಕಡ್ಡಾಯವಾಗಿ ಮಾಡಬೇಕೆಂದು ಮಾಡಿ. ಯಾವುದೇ ಹೊಸದೊಂದು ಲೇಔಟ್ ಮಾಡಿದರೆ, ಅದರಲ್ಲಿ ಕಡ್ಡಾಯವಾಗಿ ಇದು ಸೇರಿರಬೇಕು ಎಂದು ಮಾಡಬೇಕು. ಆದರೆ ಇದನ್ನು ಜಲಮಂಡಳಿ ಮಾಡಲಿಕ್ಕಾಗುವುದಿಲ್ಲ.

ಏಕೆಂದರೆ, ಅವರಲ್ಲಿರುವ ಪವರ್ಸ್ ಲಿಮಿಟೆಡ್ ಇದೆ. ಆದುದರಿಂದ ನೀವು ಮುನಿಸಿಪಾಲಿಟ್ ಆಕ್ಟ್‌ಗೆ ತಿದ್ದುಪಡಿ ತಂದು ಕಡ್ಡಾಯ ಮಾಡಿಸಿ. ಅವಾಗ ಏನಾಗುತ್ತದೆ ಎಂದರೆ, ನೀವು ಲ್ಯಾಂಡ್ ರೆವಿನ್ಯೂ ಅರಿಯರ್ಸ್ ಕಲೆಕ್ಟ್ ಮಾಡಬೇಕೆಂದು ಹೇಳುತ್ತೀರಿ, ಕಲೆಕ್ಟ್ ಮಾಡಲು ನಿಮಗೆ ಅಧಿಕಾರವೆಲ್ಲಿದೆ? ನಿಮ್ಮ ಹತ್ತಿರ ಅಧಿಕಾರವಿಲ್ಲ, ಅದನ್ನು ಮುನಿಸಿಪಾಲಿಟಿ ಆಕ್ಟ್ ಮೂಲಕ ಮಾಡಿಸಬಹುದು. ಚೆನ್ನೈನಲ್ಲಾಗಿರುವುದು, ಅಲ್ಲಿರುವ ಮುನಿಸಿಪಾಲಿಟಿ ಆಕ್ಟ್ ಅನ್ನು ತಿದ್ದುಪಡಿ ಮಾಡಿ ಅನ್ನು ಈ ರೀತಿಯಾಗಿ ಕಾನೂನು ಮಾಡಿರುವುದು. ಆದುದರಿಂದ ಇದು ಪ್ರಾಕ್ಟಿಕಲ್ ಆಗಬೇಕಾದರೆ ಮತ್ತು ಕಾರ್ಪೋರೇಷನ್ ಮಟ್ಟದಲ್ಲಿ ಅವರ ಇಂಜಿನಿಯರ್ಸ್ ಇರುತ್ತಾರೆ, ಸೈಟ್ ಏರಿಯಾವನ್ನು ಮೆಷರ್ಮೆಂಟ್ ಮಾಡುತ್ತಾರೆ. ಒಂದು ದೊಡ್ಡ ಬೃಹತ್ ಕಟ್ಟಡವಿದ್ದರೆ, ಇದು ಎಷ್ಟು ಚ.ದ. ಅಡಿ ಬಲ್ಡಿಂಗ್, ಎಷ್ಟು ಖರ್ಚಾಗುತ್ತದೆ, ಇದು ಅವರ ಹತ್ತಿರ ರೆಡಿಮೆಡ್ ಪ್ಲಾನ್ ಇರುತ್ತದೆ, ಇದನ್ನೆಲ್ಲಾ ತಿಳಿದುಕೊಳ್ಳುವುದಕ್ಕೆ ಅವಕಾಶವಿರುತ್ತದೆ. ಆದರೆ ಜಲಮಂಡಳಿಗೆ ಆ ಯಾವ ಅವಕಾಶವೂ ಇಲ್ಲ, ಇದನ್ನು ಜಾರಿ ಮಾಡುವ ಸಾಧ್ಯತೆಯು ಕೂಡ ಬಹಳ ಕಡಿಮೆ ಇದೆ. ಆದುದರಿಂದ ನನ್ನ ಸಲಹೆ ಏನೆಂದರೆ, ಒಂದು ಪ್ಲಾನ್ ಸ್ಯಾಂಕ್ಷನ್ ಅಡಿಯಲ್ಲಿ ಸೇರಿಸಿಕೊಳ್ಳಿ, ಈ ರೀತಿ ಕಡ್ಡಾಯ ಮಾಡುವುದು ನಮಗೆ ಅವಶ್ಯಕತೆ ಇದೆ, ನಿಮಗೆ ಆ ಅಧಿಕಾರವಿರುವುದಿಲ್ಲ. ಮಾನ್ಯ ಮಂತ್ರಿಗಳಾದ ಸುರೇಶ್ ಕುಮಾರ್ ಅವರಿದ್ದಾರೆ, ಬಹುಶಃ ಅವರಿಗೆ ಇದು ಅರ್ಥವಾಗಬಹುದು. ಆ ರೀತಿಯಾಗಿ ತಂದರೆ ಖಂಡಿತವಾಗಿಯೂ ಅನುಕೂಲವಾಗುತ್ತದೆಂದು ನನ್ನ ಒಂದು ಸಲಹೆ.

ಶ್ರೀ ಬಿ.ಎನ್. ಬಚ್ಚೇಗೌಡ: ದಿನೇಶ್‌ರವರೇ It is confined only to BWSSB.

ಶ್ರೀ ದಿನೇಶ್ ಗುಂಡೂರಾವ್: It is confined to Bangalore City.

ಶ್ರೀ ಬಿ.ಎನ್. ಬಚ್ಚೇಗೌಡ: You are talking of the State. ನೀವು suggest ಮಾಡಿದ್ದೀರಿ. You have suggested...

ಶ್ರೀ ದಿನೇಶ್ ಗುಂಡೂರಾವ್: ಎಲ್ಲಾ ಸ್ವಾಮಿ, ನಾನು ಬೆಂಗಳೂರಿಗೆ ಹೇಳುತ್ತಿರುವುದು.

ಶ್ರೀ ಬಿ.ಎನ್. ಬಚ್ಚೇಗೌಡ: No. No. You have suggested ಮುನಿಸಿಪಾಲಿಟಿಯಲ್ಲೂ ತೆಗೆದುಕೊಂಡು ಬನ್ನಿ ಎಂದು but that is not there in the Bill.

ಶ್ರೀ ದಿನೇಶ್ ಕುಮಾರ್: Concerned Corporation Actಗೆ ತೆಗೆದುಕೊಂಡು ಬನ್ನಿ. ಬೃಹತ್ ಬೆಂಗಳೂರು ಮಹಾನಗರಕ್ಕೆ ಹೊಸ ಆಕ್ಟ್ ಇದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮಾಡಿದ್ದೀರಲ್ಲಾ ಅದರಲ್ಲಿ ಇದನ್ನೆಲ್ಲಾ ತೆಗೆದುಕೊಂಡು ಬನ್ನಿ. ಪ್ಲಾನ್ ಸ್ಯಾಂಕ್ಷನ್, ಸೈಟ್ ಏರಿಯಾ, ಲೇಔಟ್ ಏರಿಯಾ ಎಲ್ಲಾ ಅದರಲ್ಲಿ ಬರುತ್ತದೆ. ಇದು ಜಲಮಂಡಳಿಗೆ ಇದು ಬೇಡ, ಸುರೇಶ್ ಕುಮಾರ್ ರವರೆ ದಯವಿಟ್ಟು ಸ್ವಲ್ಪ ಆಲೋಚನೆ ಮಾಡಿ. ನಾವು ಇದಕ್ಕೆ ಒಪ್ಪಿಗೆ ಕೊಡುತ್ತೇವೆ, ಆದರೆ ಇದನ್ನು ಬೇರೆ ರೂಪದಲ್ಲಿ ತೆಗೆದುಕೊಂಡು ಬನ್ನಿ ಎಂದು ಹೇಳುತ್ತಿದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ): ಮಾನ್ಯ ಅಧ್ಯಕ್ಷರೆ, ನಮ್ಮ ಬೆಂಗಳೂರು ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಇದೆ, ಅದನ್ನು ತಿದ್ದುಪಡಿಯನ್ನು ತಂದಿದ್ದಾರೆ, ನಮ್ಮ ವಿರೋಧ ಪಕ್ಷದ ನಾಯಕರು ಹಾಗೂ ದಿನೇಶ್ ಗುಂಡೂರಾವ್ ಅವರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಏಕೆಂದರೆ, ಇವರಲ್ಲಿರುವ ಸಿಬ್ಬಂದಿಯೇ ಕಡಿಮೆ. ಪ್ಲಾನ್ ಮಾಡುವುದಾಗಲಿ, ಹೊಸ ಲೇಔಟ್ ಮಾಡುವುದಕ್ಕಾಗಲಿ, ಕಾರ್ಪೋರೇಷನ್‌ಗೆ ಸಂಪೂರ್ಣ ಅಧಿಕಾರವಿದೆ. ಬಿಬಿಎಂಪಿನಲ್ಲಿ ಹೊಸ ಕಾನೂನು ಮಾಡಿದ್ದಾರೆ, ಅದರಲ್ಲಿ ಸೇರಿಸಿಕೊಂಡು ಇದನ್ನು ತರುವುದು ಸೂಕ್ತವಾಗಿದೆ ಎಂದು ದಿನೇಶ್ ಗುಂಡೂರಾವ್ ಅವರು ಹೇಳಿದ್ದಾರೆ ಅದು ನೂರಕ್ಕೆ ನೂರರಷ್ಟು ಮಾಡಬೇಕೆನ್ನುವುದು ನನ್ನ ಅಭಿಪ್ರಾಯವಾಗಿದೆ. ಅದರ ಜೊತೆಗೆ 30x40 ಸೈಟ್ ಇಟ್ಟುಕೊಂಡಿರುವ ಬಡವರು ಇರುತ್ತಾರೆ, ಅಂಥವರಿಗೆ ಮಾಡುವುದಕ್ಕೆ ಸರ್ಕಾರದಿಂದಲೇ ಫ್ರೀ ಆಗಿ ಮಾಡಿಸಿಕೊಡಿ, ಅವರಿಗೆ ಹಾಕಿ ಬಿಟ್ಟು ಕಂದಾಯ ವಸೂಲ್ಮಾಡುತ್ತೇವೆಂದು ನೀವು ಹೇಳುವುದು ಬೇಡ. ಬೇಕಾದರೆ, ನಿಮ್ಮ ಮಹಾನಗರ ಪಾಲಿಕೆಯಿಂದಲಾದರೂ ಮಾಡಿ, ಒಳಚರಂಡಿ

ಮಂಡಲಿಯಿಂದಲಾದರೂ, ಅವರಿಗೆ ಫ್ರೀ ಆಫ್ ಕಾಸ್ಟ್‌ನಲ್ಲಿ ಮಾಡಿ. ಮಾನ್ಯಮಂತ್ರಿಗಳು, ನಾವು 30x40 ಸೈಟ್‌ಗೆ ನಾವು ಮಾಡಿ ಬಿಟ್ಟು, ಆಮೇಲೆ ನಾವು ಟ್ಯಾಕ್ಸ್ ವಸೂಲ್ಮಾಡುತ್ತೇವೆಂದು ಎನ್ನುವ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ, ಆದಾಗುವುದು ಬೇಡ. ಕೆಲವು ಕಡೆ 50x80ನಲ್ಲಿ ಜಾಗ ಬಿಡದೇ ಕಟ್ಟಡಗಳನ್ನು ಕಟ್ಟಿರುತ್ತಾರೆ, ಅಂಥಕಡೆಗಳಲ್ಲಿ ಏನು ಮಾಡಬೇಕೆನ್ನುವುದು ಕಾರ್ಪೋರೇಷನ್‌ಗೆ ಗೊತ್ತಿರುತ್ತದೆ. ಒಳಚರಂಡಿ ಮಂಡಳಿಯ ಸಿಬ್ಬಂದಿ ಎಷ್ಟಿದ್ದಾರೆಂಬುದು ಗೊತ್ತಿದೆ, ಈಗಿರುವ ಕೆಲಸ ಮಾಡುವುದಕ್ಕೆ ಅವರಲ್ಲಿ ಸಿಬ್ಬಂದಿ ಇಲ್ಲ. ಮಾನ್ಯ ಸದಸ್ಯರಾದ ದಿನೇಶ್ ಗುಂಡೂರಾವ್ ಅವರು ಹೇಳಿದಂತೆ ಇದನ್ನು ಬಿಬಿಎಂಪಿ ಅಥವಾ ಕಾರ್ಪೋರೇಷನ್ ವತಿಯಿಂದ ಮಾಡಲು ಈ ಬಿಲ್ ಅನ್ನು ತಿದ್ದುಪಡಿ ಮಾಡಿ ಬಿಬಿಎಂಪಿ ಕಡೆಯಿಂದ ಮಾಡುವುದು ಸೂಕ್ತವೆಂದು ನನ್ನ ಭಾವನೆ.

ಶ್ರೀ ಅಪ್ಪಾಜಿ ನಾಡಗೌಡ (ಮುದ್ದೇಬಿಹಾಳ): ಮಾನ್ಯ ಅಧ್ಯಕ್ಷರೆ, ಈಗೇನು ಒಂದು ಮಸೂದೆಯನ್ನು ತಂದಿದ್ದಾರೆ, ಇದು ನಿಜವಾಗಿಯು ಕೂಡ novel concept. ಅದರಲ್ಲಿ ಯಾವ ಅಭ್ಯಂತರನೂ ಇಲ್ಲ. ಆದರೆ ಇಲ್ಲಿ ಒಂದು ತಾಪತ್ರೆ ಇಲ್ಲಿ ಬರುತ್ತದೆ. ಅದೇನೆಂದರೆ, ಬೆಂಗಳೂರು ಗ್ರೋತ್ ಹೇಗಿದೆ ಎಂದರೆ unplanned ಇದೆ. ಬಹಳ unplanned ಇದೆ. ಇದನ್ನು ನಾವೆಲ್ಲ ಒಪ್ಪಬೇಕಾಗಿದೆ, ಈಗ ತಾನೆ 7 ಲಕ್ಷ ಮನೆಗಳನ್ನು ರೆಗ್ಯುಲರೈಸ್ ಮಾಡಬೇಕೆಂದು ಮಸೂದೆಯನ್ನು ತರುತ್ತಿದ್ದೇವೆ. ಯಾವ ರೀತಿ ಕಟ್ಟಿದ್ದಾರೆ, ಅಲ್ಲಿ off-sides ಬಿಟ್ಟಿದ್ದಾರೊ ಇಲ್ಲವೊ, ರಸ್ತೆಗಳು ಎಷ್ಟು ವೈಡ್ ಇದ್ದಾವೆ ಇವೆಲ್ಲಾ ಬರುತ್ತದೆ. ಹೀಗಿರುವ ಬೆಂಗಳೂರಿನಲ್ಲಿ ನೀವು ಎಷ್ಟು ಚಿಕ್ಕ ಸೈಟಿಗೆ ಇದನ್ನು ಅನ್ವಯಿಸಬೇಕೆಂದಿದ್ದೀರಿ, ಅದರ ಸಾಧ್ಯತೆ ಕಡಿಮೆಯಾಗುತ್ತದೆ. ಆಮೇಲೆ ಇಲ್ಲಿ ಇನ್ನೊಂದು ಇದೆ the nature of soil as such, ನೀವು ಬೇಕಾದರೆ ಇಂಜಿನಿಯರ್ಸ್ ಅನ್ನು ಕನ್ಸಲ್ಟ್ ಮಾಡಬಹುದು. ಇಲ್ಲಿ ಬೇಗನೆ SBC ಸಿಗುವುದಿಲ್ಲ, ಕೆಲವೊಂದು ಏರಿಯಾದಲ್ಲಿ ಸಿಗಬಹುದು. ಎಲ್ಲಿ ನಮಗೆ SBC ಸರಿಯಾದ hardness ಬರುವುದಿಲ್ಲ, ಎಲ್ಲಿ soil treasures ಇದೆ ಅಲ್ಲಿ tank beds. Most of the tank beds ಮೇಲೆ ನಾವು ಇವತ್ತು ಹಾಕುವುದು, ಇವತ್ತೆಲ್ಲಾ ನಿವೇಶನಗಳನ್ನು ಟ್ಯಾಂಕ್ ಬೆಡ್ಸ್ ಮೇಲೆ ಕಟ್ಟಲಾಗಿದೆ. ನೀವು 30x40ನಲ್ಲಿ ಫುಟಿಂಗ್ ಸಿಕ್ಕಾಪಟ್ಟ ವೈಡ್ ಹಾಕಿಕೊಳ್ಳುತ್ತಾರೆ, whole area is covered. ಎಫ್‌ಆರ್ ರೇಟಿಂಗ್ ಈಗ ಹೆಚ್ಚು ಮಾಡಿದ್ದಾರೆ, ಒಂದು ಬಿಟ್ಟು ಮೂರು ಅಂತಸ್ತು, ನಾಲ್ಕು ಅಂತಸ್ತು ಕಟ್ಟಿಕೊಳ್ಳಬಹುದು, ಅದಕ್ಕೆ ತಕ್ಕಂತೆ

ಫುಟ್ಟಿಂಗ್ ಡಿಸೈನ್ ಮಾಡುತ್ತಾರೆ. ಆ ಫುಟ್ಟಿಂಗ್ ಡಿಸೈನ್ ಮಾಡಿದಾಗ hardly there is any space left. ನೀವೇನಾದರು ಅಲ್ಲಿ percolating ಒಂದು tube well ಮತ್ತೊಂದು ಮಾಡಿದರೆ, there is possibility of whole building shrinking. ನೀವು ಇದನ್ನೆಲ್ಲಾ technically ನೋಡಬೇಕು. ಅದಕ್ಕೆ ನಾನು ಹೇಳುವುದು, 30x40 ಸೈಟಿಗೆ ಬದಲಾಗಿ, ಅಲ್ಲಿ ಎಲ್ಲಿ ಸಾಧ್ಯತೆ ಕಡಿಮೆ ಇದೆ ಅಲ್ಲಿ community harresting ಮಾಡಿ, collect the taxes from them ಅದಕ್ಕೆ floor rate ಮೇಲೆ ಹಾಕಿ, ಅಲ್ಲಿ ತೆಗೆದುಕೊಳ್ಳಲಿ ಬೇಡವೆಂದು ಹೇಳುವುದಿಲ್ಲ. ಅಲ್ಲಿ community harvesting ಮಾಡಿ. Community Harvesting ಎಲ್ಲಿ ಮಾಡಬಹುದೆಂದು ಅವರು ಆಗಲೆ ಹೇಳಿದರು, ಪಾರ್ಕ್‌ನಲ್ಲಿ ಮಾಡುತ್ತೇವೆಂದು ಹೇಳಿದರು. ಸರ್ಕಾರದ ಎಲ್ಲಿಯಾದರು ಖಿಲ್ಲಾ ಜಾಗವಿದ್ದರೆ, ಅಲ್ಲಿ ಈ community harvesting ಪದ್ಧತಿಯನ್ನು ತರಬಹುದು. ಇನ್ನು ಮಾಡೆಲ್ ಆಗಿ ಹೌಸಿಂಗ್ ಬೋರ್ಡಿನಲ್ಲಿ ಕೆಲವು ಕಡೆ ಮಾಡಿದ್ದಾರೆ, you can also avail some technical knowledge from them. ಇಲ್ಲವೆಂದು ಹೇಳುವುದಿಲ್ಲ. ಅದಕ್ಕೆ 30x40ಗೆ ಬದಲಾಗಿ 60x40ಗೆ ಕಡ್ಡಾಯವಾಗಿ apply ಮಾಡಿ, ಎಲ್ಲಿ possibility ಕಡಿಮೆಯಾಗಿದೆ, ಹಳೆಯ structures ಇದೆ, ಅವರು ಆಗಲೆ ಹೇಳಿದಂತೆ ಸಂಪೂರ್ಣ ಕವರ್ ಆಗಿದೆ, ಕೆಲವು 50x80 ಸೈಟ್ ಇದೆ, ಕೆಲವರು ಪೂರ್ತಿ ಒಂದಿಂಚು ಬಿಡದಂತೆ ಕಟ್ಟು ಬಿಟ್ಟಿದ್ದಾರೆ, ಈಗ ಹೊಡೆಯುವುದಕ್ಕಾಗುವುದಿಲ್ಲ. ಪ್ಲಾನ್ ಸ್ಯಾಂಕ್ಷನ್ ಆಗಿದೆ, 20–30 ವರ್ಷಗಳಿಂದ ವಾಸ ಮಾಡುತ್ತಿದ್ದಾರೆ. ಅಂಥವರಿಂದ ನೀವು floor rate ಪ್ರಕಾರ ರೇಟ್ಸ್ ಕಲೆಕ್ಟ್ ಮಾಡಿ community harvesting ಮಾಡುವ ಪದ್ಧತಿಯನ್ನು ಅಳವಡಿಸಬೇಕು. ಮತ್ತೆ ಇದನ್ನು ಕೇವಲ BWSSB ಗೆ ಮಾತ್ರ ದಯಮಾಡಿ ಸೀಮಿತ ಮಾಡಬೇಡಿ, ಈ ತಿದ್ದುಪಡಿಯನ್ನು ಮುನಿಸಿಪಾಲಿಟಿ ಆಕ್ಟ್‌ಗೂ ತಿದ್ದುಪಡಿಯನ್ನು ತರಬೇಕು, this is my request. ಏಕೆ ಹೇಳುತ್ತಿದ್ದೇನೆಂದರೆ, ಇದು ಇಡೀ ರಾಜ್ಯದಲ್ಲಿ ಇದಾಗಬೇಕು. ಎಲ್ಲಿಯವರೆಗೆ rain harvesting system implement ಮಾಡುವುದಿಲ್ಲ, ಅಲ್ಲಿಯವರೆಗೆ ವಾಟರ್ ಕನೆಕ್ಷನ್ ಆಗಲಿ, ಕೆಇಬಿ ಕನೆಕ್ಷನ್ ಆಗಲಿ ಕೊಡಲಾರದ್ದನ್ನು ಕಡ್ಡಾಯ ಮಾಡಬೇಕು, ಆವಾಗ ಇದು 100% ಇಂಪ್ಲಿಮೆಂಟ್ ಆಗುತ್ತದೆ, ಇಷ್ಟು ಸಲಹೆಯನ್ನು ನಾನು ಕೊಡುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಶಿರಾ): ಮಾನ್ಯ ದಿನೇಶ್ ಗುಂಡೂರಾವ್ ಮತ್ತು ನಾಡಗೌಡರವರು ಬಹಳ ಸೂಕ್ತವಾದ ಸಲಹೆಯನ್ನು ಕೊಟ್ಟಿದ್ದಾರೆ. BWSSB ಅವರು ಈ ತಿದ್ದುಪಡಿಯನ್ನು ತರುವುದರ ಬದಲು, ಇಡೀ ರಾಜ್ಯದ ಮುನಿಸಿಪಾಲಿಟಿ ಆಕ್ಟ್ ತನ್ನಿ ಮತ್ತು ಕಾರ್ಪೋರೇಷನ್ ಆಕ್ಟ್‌ಗೆ ತನ್ನಿ entire stateಗೆ ತನ್ನಿ. ಆದರೆ ಮುಂದೆ ತರುವಂಥ ಸಂದರ್ಭದಲ್ಲೂ ಕೂಡ ಬಹಳ ಎಚ್ಚರಿಕೆಯಿಂದಿರಬೇಕು. ಇಲ್ಲಿ 30x40 ಸೈಟಿನಲ್ಲಿ ಕಟ್ಟಿದ್ದಕ್ಕೆ ಎಂದು ಹೇಳುತ್ತೀರಿ, ಸಂಪೂರ್ಣವಾಗಿ ಅದರಲ್ಲಿ ಮನೆಯನ್ನು ಕಟ್ಟು ಬಿಟ್ಟಿರುತ್ತಾನೆ, ಅಲ್ಲಿ BWSSB ಅವರು ಬಂದು, ಕಾರ್ ಪಾರ್ಕಿಂಗೊ, ಶೆಡ್ಡೊ ಮತ್ತೊಂದು ಮಾಡಿಕೊಂಡಿರುತ್ತಾರೆ, ಅಲ್ಲಿ ನಾವು ಮಾಡುತ್ತೇವೆಂದರೆ ಎಷ್ಟು ಕಷ್ಟವಾಗುತ್ತದೆ? ಅದನ್ನೂ ಕೂಡ ನೀವು ಯೋಚನೆ ಮಾಡಬೇಕು. ಜೊತೆಗೆ ಬೆಂಗಳೂರಿನಲ್ಲಿ ಗ್ರೌಂಡ್ ವಾಟರ್ ಇರುವುದು ನಮ್ಮ ಅರ್ಕಾವತಿ ಬೆಲ್ಟ್‌ನಲ್ಲೆ ಇರುವುದು. ಇಲ್ಲಿ ಮಳೆ ನೀರು ಯಾವುದೇ ರೀತಿಯಲ್ಲಿ ಶೇಖರಣೆಯಾಗುತ್ತಿಲ್ಲ. ಇವತ್ತು ಎಲ್ಲಾ ಕಡೆ ಕಾಂಕ್ರಿಟ್ ರೋಡ್ ಆಗಿರುವುದರಿಂದ ಎಲ್ಲೂ ನೀರು ಶೇಖರಣೆಯಾಗುವುದಕ್ಕೆ ಸಾಧ್ಯವಿಲ್ಲ. ಉದ್ದೇಶವೇನೊ ಒಳ್ಳೆಯದಿದೆ, ಇದನ್ನು ಮಾಡಲೇಬೇಕು, ಆದರೆ ಯಾವ form ನಲ್ಲಿ ತರಬೇಕು, ಯಾವ ಆಕ್ಟ್‌ನಲ್ಲಿ ತರಬೇಕೆನ್ನುವುದನ್ನು ಯೋಚನೆ ಮಾಡಿ.

ಶ್ರೀ ಆರ್. ಅಶೋಕ್ (ಸಾರಿಗೆ ಸಚಿವರು): ಬೆಂಗಳೂರಿನಲ್ಲಿ ಬಹುತೇಕ ಮನೆಗಳನ್ನು ಏನು ಕಟ್ಟಿರುವುದು, 60% of the sites 30x40ನೇ. ನೀವು ಅದನ್ನು ಬಿಟ್ಟರೆ, only 20-30% ಇದು implement ಆಗುತ್ತದೆ. Major portion of Bangalore sites ಏನಿದೆ, ಆ ರೇಶಿಯೊ 30x40 60% ನಿವೇಶನಗಳಿರುವುದು. ಅದನ್ನು ಬಿಟ್ಟರೆ ಇದನ್ನು ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಈಗ 30x40 ಪೂರ್ತಿ ಕಟ್ಟು ಬಿಟ್ಟಿರುತ್ತಾನೆ, ನೀವು ಹೊಸದಾಗಿ ಪ್ಲಾನ್ ಸ್ಯಾಂಕ್ಷನ್ ಮಾಡುವ ಸಂದರ್ಭದಲ್ಲಿ, ನೀವು ಆ ಕಂಡಿಷನ್ ಹಾಕಿ ಮಾಡಿದರೆ, ಅವನಿಗೆ ರಿಸನೇಬಲ್ ಆಗಿ ಇರುತ್ತದೆ, ಅವನು ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ, ನಾಳೆ ಅವನು ಹೊಡೆದು ಹಾಕುವುದಕ್ಕೆ, ಕಿತ್ತು ಹಾಕುವುದಕ್ಕೆ ಸಾಧ್ಯ. 30x40ರಲ್ಲಿ ಸಂಪೂರ್ಣವಾಗಿ ಕಟ್ಟಿಬಿಟ್ಟಿರುತ್ತಾನೆ, ಎಲ್ಲಿ ಮಾಡುತ್ತೀರಿ? ಮನೆ ಹೊಡೆಯಬೇಕಾಗುತ್ತದೆ, ಇದನ್ನು ಯೋಚನೆ ಮಾಡಿ. ನಾವು ಆಕ್ಟ್ ಅನ್ನು ಬಹಳ ಸುಲಭವಾಗಿ ಪಾಲ್ ಮಾಡಿಬಿಡುತ್ತೇವೆ,

ನಾಳೆ ಇಂಪ್ಲಿಮೆಂಟ್ ಸ್ಟೇಜ್‌ಗೆ ಹೋದಾಗ, ಅದರಲ್ಲಿ exploitation ಆಗುತ್ತದೆ, ಅದಾಗಬಾರದೆನ್ನುವ ಕಾರಣಕ್ಕೋಸ್ಕರ ನಾನು ಈ ಸಲಹೆಯನ್ನು ಕೊಡುತ್ತಿರುವುದು. ನಿಮಗೆ ಅಷ್ಟೊಂದು ಈ ಬೆಲ್ಟ್‌ನಲ್ಲಿ ಇರತಕ್ಕಂತಹ ನೀರನ್ನು ಗ್ರೌಂಡ್ ವಾಟರ್ ಲೆವಲ್ ಅನ್ನು ರೈಸ್ ಮಾಡಬೇಕು ಎನ್ನುವುದಾದರೆ, ಅದು ಮನೆ ಕಟ್ಟಿದವರ ಜವಾಬ್ದಾರಿಯಾ ಸರ್ಕಾರದ ಜವಾಬ್ದಾರಿ ಇರಲ್ಲವಾ? ನೀವೇಕೆ ಅಲ್ಲಿ...

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೆ, ಸರ್ಕಾರಿ ಜಮೀನುಗಳಲ್ಲಿ ಪಾರ್ಕುಗಳಲ್ಲಿ, ಸರ್ಕಾರಿ ಸ್ವಾಮ್ಯದಲ್ಲಿರುವಂತಹ ಕಾರ್ಖಾನೆಗಳಲ್ಲಿ, industrial shedsನಲ್ಲಿ ಎಲ್ಲಾ ಭಾಗಗಳಲ್ಲಿಯೂ ಕೂಡ ಇದನ್ನು ಮಾಡುತ್ತೇವೆ. ಮುನಿಸಿಪಲ್ acute ಅಮೆಂಡ್‌ಮೆಂಟ್ ಅದರಲ್ಲಿಯೂ ತರಬೇಕೆಂದರೆ ತರೋಣ. ಅದರ ಬಗ್ಗೆ ಏನು ವ್ಯತ್ಯಾಸ ಇಲ್ಲ. BWSSB ಯಿಂದ ಮಾತ್ರ ಮಳೆ ಕೊಯಿಲು ಪದ್ಧತಿಗೆ ಪ್ರತ್ಯೇಕವಾದ ವ್ಯವಸ್ಥೆ ಇದೆ. ಅದನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಕಾಪೂರೇಷನ್‌ಗೆ ಈಗಿರುವ ಕೆಲಸಗಳ ಜೊತೆಯಲ್ಲಿ ಇದನ್ನು ಜವಾಬ್ದಾರಿ ವಹಿಸಿದರೆ ಅದು ಅಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. 30x40 ಸೈಟುಗಳ ಬಗ್ಗೆ ತಾವು ಮಾತನಾಡುತ್ತಿದ್ದೀರಿ. 20% ಮನೆಗಳು ತಾವು ಹೇಳಿದ್ದು ನಿಜ. ಒಂದು ಬೋರ್‌ವೆಲ್ ಹಾಕಿಕೊಂಡಿದ್ದಾರೆ, ಒಂದು ಸಂಪ್ ಟ್ಯಾಂಕ್ ಹಾಕಿಕೊಂಡಿದ್ದಾರೆ, ಒಂದು ಬಾವಿ ತೋಡಿಕೊಂಡಿದ್ದಾರೆ, ಅನೇಕ ಭಾಗಗಳಲ್ಲಿ ಹಳೆಯ ಮನೆಗಳು ಕಟ್ಟಿರುವಂತಹ ಜಾಗಗಳಲ್ಲಿ ನಾವೂ ಕೂಡ ನೋಡಿದ್ದೇವೆ. ಆ ಭಾಗಗಳಲ್ಲಿ ಅಂತರ್ಜಲದ ಮಟ್ಟವನ್ನು ಏರಿಸುವುದಕ್ಕೋಸ್ಕರ ಬಾವಿಯಲ್ಲಿ ನೀರನ್ನು ಸಂಪ್‌ನಲ್ಲಿ ಶೇಖರಣೆ ಮಾಡಿಕೊಳ್ಳಬಹುದು, ಬೋರ್‌ವೆಲ್‌ಗಳಿಗೆ ಕೂಡ ನರು ತುಂಬಿಸಿಕೊಳ್ಳಬಹುದು. ಪರಿಣಾಮಕಾರಿಯಾದ ಜನ ಇಲ್ಲವೆಂದು ಮಾನ್ಯ ರೇವಣ್ಣರವರು ಹೇಳಿದರು. ಇಷ್ಟು ದಿನ ಸಿಬ್ಬಂದಿ ಇರಲಿಲ್ಲ ನಿಜ. ಈಗ ನಾವು 300 ಜನರಿಗೆ ನೇಮಕ ಮಾಡಿದ್ದೇವೆ. ಈಗ ನಮ್ಮ ಸಿಬ್ಬಂದಿಯನ್ನು ಹೆಚ್ಚಿಸಿ ಕೊಳ್ಳತಕ್ಕಂತಹ ಕೆಲಸವನ್ನು ಮಾಡಿದ್ದೇವೆ. ಪರಿಣಾಮಕಾರಿಯಾಗಿ ಜನರಿಗೆ ನೀರನ್ನು ಕೊಡಬೇಕಾದರೆ ನಮಗೆ ಹೇಮಾವತಿಯಿಂದ ನೀರು ತರುವುದಕ್ಕಾಗುವುದಿಲ್ಲ. ಈ ಕಡೆಯಿಂದ ತೊರೆಕಾಡನಹಳ್ಳಿಯಿಂದ ಕಾವೇರಿಯಿಂದ ನೀರು ತರುವುದಕ್ಕಾಗುವುದಿಲ್ಲ. ಅಲ್ಲಿಂದ ನೀರು ತರುವುದಕ್ಕಾಗುತ್ತಾ, ಉತ್ತರ ಕರ್ನಾಟಕದಿಂದ ಆಲಮಟ್ಟಿಯಿಂದ

ಸರ್ಫೇಸ್ ವಾಟರ್ ತರುತ್ತೇವೆಂದರೆ ಅವರು ಗಲಾಟೆ ಮಾಡಿದರು. ಮಾನ್ಯ ನಾಡಗೌಡರು ಬೆಳಗಾಂನಲ್ಲಿ ನೀವು ನೀರನ್ನು ಬೆಂಗಳೂರಿಗೆ ಕೊಂಡೊಯ್ಯುತ್ತೀರಿ ಎಂದು ಗಲಾಟೆ ಮಾಡಿದಿರಿ.

ಶ್ರೀ ಅಪ್ಪಾಜಿ ಎಸ್. ನಾಡಗೌಡ: ಮಾನ್ಯ ಅಧ್ಯಕ್ಷರೆ, ಗಲಾಟೆ ಅಲ್ಲ ಇನ್ನು ಅಲ್ಲಿ ವಾಟರ್ ಅಲೋಕೇಷನ್ ಆಗಿಲ್ಲ. ಬಿ ಸ್ಕೀಮ್‌ನಲ್ಲಿ ವಾಟರ್ ಅಲೋಕೇಷನ್ ಆಗಿಲ್ಲ, ನೀವು ನೀರು ತೆಗೆದುಕೊಂಡು ಬರುತ್ತೀರಿ ಎಂದರೆ, ಅಲ್ಲಿದ್ದವರು ಏನು ಮಾಡಬೇಕು ಹೇಳಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಒಂದು ಪ್ರಶ್ನೆ, ನೀವು ನಾಳೆ ಕಾರ್ಪೂರೇಷನ್ Act ಅಥವಾ ಮುನಿಸಿಪಲ್ Act ನಲ್ಲಿ ಅಮೆಂಡ್‌ಮೆಂಟ್ ತರುವಂತಹ ಸಂದರ್ಭದಲ್ಲಿ ಬರೀ ವಾಟರ್ ಸಪ್ಲೈ ಸೀವರೇಜ್ ಬೋರ್ಡ್‌ಗೆ ಸೀಮಿತವಾಗಿರುವಂತಹದ್ದು ನಾಳೆ ಪಬ್ಲಿಕ್ ಪಾರ್ಕ್ ಅಥವಾ ಇನ್ನೊಂದು ಜಾಗ ಇದೆ ಎಂದು ಇಟ್ಟುಕೊಳ್ಳಿ. Again power is vested with the Corporation only. BWSSBಯವರು ಹೇಗೆ ಮಾಡುತ್ತಾರೆ, ಮಾಡುವುದಕ್ಕಾಗುತ್ತಾ? ಕಾರ್ಪೂರೇಷನ್‌ನವರು ಇದು ನಮ್ಮ ಜಾಗ ಎಂದು ಹೇಳುತ್ತಾರೆ. ನಾನು ಒಪ್ಪಿಕೊಳ್ಳುತ್ತೇನೆ, ಫಾರಂನಲ್ಲಿ ತರಬೇಕೆಂದು ಹೇಳಿ. BWSSB ಏಕೆಂದರೆ ವ್ಯಾಪ್ತಿಗೆ ಬರುವಂತಹ ಜಮೀನುಗಳು ಏನಾದರೂ ಇವತ್ತು ಇದೆಯೇ? ಇದ್ದಿದ್ದೆಲ್ಲಾ ಡಿನೋಟಿಫಿಕೇಷನ್ ಮಾಡಿದ್ದೀರಿ. BWSSBಯವರಿಗೆ ಕೇಳಿ, 30 ಎಕರೆ ಭೂಮಿ ಡಿನೋಟಿಪೈ ಮಾಡಿ ಆರು ತಿಂಗಳುಗಳಾಗಿವೆ. ನಿಮ್ಮ ಸರ್ಕಾರವೇ ಮಾಡಿರುವುದು.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ನಾವು ಮಾಡಿಲ್ಲ. ಯಾರು ಮಾಡಿದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಿ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೇ, ನಿಮ್ಮ ಸರ್ಕಾರವೇ ಮಾಡಿರುವುದು. ಆರು ತಿಂಗಳ ಮುಂಚೆ ಯಾರಿದ್ದರು? ಜನಗಳು ಮಾಡುವುದಾದರೆ ಮಾತ್ರ ಬೇಗ ಕಾನೂನು ತಂದು ಬಿಡುತ್ತೀರಿ. ನೀವೇನು ಮಾಡುತ್ತಿದ್ದೀರಿ ಎಂದು ಕೇಳಿದಾಗ ಈ ಪ್ರಶ್ನೆ ಬರುತ್ತದೆ. BWSSB ಜಾಗ ಇದ್ದಿದ್ದನ್ನು ನೀವು ತೆಗೆದುಕೊಂಡು ಹೋಗಿ ಡಿನೋಟಿಫಿಕೇಷನ್ ಮಾಡಿ, 30 ಎಕರೆ ಜಮೀನು ಸುಮಾರು 30 ರಿಂದ 40 ಕೋಟಿ ರೂ. ಬೆಲೆ ಬಾಳುವ ಜಮೀನು ತೆಗೆದುಕೊಂಡು ಹೋಗಿ ಡಿನೋಟಿಫೈ ಮಾಡಿ ಕೂತಿದ್ದಾರೆ. ನಾನು ನಾಳೆ ಬೇಕಾದರೆ ಡೀಟೈಲ್ ತರುತ್ತೇನೆ. ಅದರ ಬಗ್ಗೆ ಹೇಳುವುದಕ್ಕೆ

ಕಾಲಾವಕಾಶ ಇಲ್ಲ ನಾಳೆ ಹೇಳುತ್ತೇನೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ಬೇರೆ ರೂಪದಲ್ಲಿ ಅಮೆಂಡ್‌ಮೆಂಟ್ ತೆಗೆದುಕೊಂಡು ಬನ್ನಿ.

ಶ್ರೀ ನೆ.ಲ. ನರೇಂದ್ರಬಾಬು: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಬಗ್ಗೆ ವಿಧೇಯಕ 2009 ತಂದಿದ್ದಾರೆ, ಅವರ ಉತ್ಸಾಹ ನಿಜವಾಗಿಯೂ ಅಭಿನಂದನಾರ್ಹ. ಆದರೆ ಒಂದು ಈ ಉತ್ಸಾಹದಲ್ಲಿ ಜನ ಸಾಮಾನ್ಯರಿಗೆ ಆಗತಕ್ಕಂತಹ ತೊಡಕುಗಳು ಏನು 30x40 ಸೈಟುಗಳ ಒಳಗೆ ಆಗತಕ್ಕಂಥದ್ದನ್ನು ಹೇಳುತ್ತಿದ್ದಾರೆ, ಮಾನ್ಯ ಕಾನೂನು ಸಚಿವರಿಗೂ ಗೊತ್ತಿದೆ, ಬಹುಶಃ ಅವರು ಪ್ರತಿನಿಧಿಸಿರುವಂತಹ ವಾರ್ಡ್‌ಗಳಲ್ಲಿ ಸಹ 30x40 ಸೈಟುಗಳಲ್ಲಿ ಬಿಲ್ಡ್ ಆಗಿರತಕ್ಕಂತಹ ಮನೆಗಳು ಯಾವ ಸ್ಥಿತಿಯಲ್ಲಿವೆ ಎಂದು ಗೊತ್ತು. ನಾನೂ ಕೂಡ ಗಮನಿಸಿದ್ದೇನೆ. ನನ್ನ ಕ್ಷೇತ್ರದಲ್ಲಿ ನಿರ್ಮಾಣ ಆಗಿರತಕ್ಕಂತಹ ಮನೆಗಳಲ್ಲಿ ನೀರು ಉಕ್ಕುತ್ತದೆ. ನಂದಿನಿ ಥಿಯೇಟರ್ ಹಿಂಭಾಗ ಹಾಗೂ ಸುತ್ತಮುತ್ತಲ ಮನೆಗಳಲ್ಲಿರುವಂತಹ ಬೋರ್‌ವೆಲ್‌ಗಳಲ್ಲಿ ಹಾಗೂ ಓಪನ್ ವೆಲ್‌ಗಳಲ್ಲಿ ನೀರು ಉಕ್ಕುತ್ತದೆ. ಇಂತಹವನ್ನು ಮಾಡುವಾಗ KMC Actನಲ್ಲಿ ಪ್ರಾವಿಷನ್ ಮಾಡಿದ್ದರೆ ಬಹುಶಃ ಒಳ್ಳೆಯದಾಗುತ್ತದೆ. ಉದಾಹರಣೆಗೆ ಸರ್ಕಾರ ವಿಧಾನಸೌಧದಲ್ಲಿ rain water harvesting ಮಾಡಿದೆ, ನಮಗೆ ಕಳೆದ ಬಾರಿ demonstration ಕೂಡ ಮಾಡಿದರು. BWSSB ಅಧಿಕಾರಿಗಳು ಇದನ್ನು effective ಆಗಿ ಮಾಡುತ್ತಿದ್ದಾರಾ ಎಂದು ನೋಡಬೇಕು. ನಾನು ಹಲವಾರು ಸಾರಿ ಹೋಗಿ ನೋಡಿದ್ದೇನೆ. ಇಡೀ ವಿಧಾನಸೌಧಕ್ಕೆ ರೈನ್ ವಾಟರ್ ಹಾರ್ವೆಸ್ಟಿಂಗ್ ಮಾಡಿದ್ದಾರೆ. ಯಾವದೇ ಒಂದು ಯೋಜನೆ ಮಾಡಿದರೆ ಅದರ ಸೂಪರ್‌ವಿಷನ್ ಬಹಳ ಮುಖ್ಯ. ಇವತ್ತಿಗೂ ಕೂಡ ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್‌ಗಳಲ್ಲಿ ಮಲ್ಲೇಶ್ವರಂ ಇಂತಹ ಕಡೆಗಳಲ್ಲಿ ರೈನ್ ವಾಟರ್ ಹಾರ್ವೆಸ್ಟಿಂಗ್ ಮಾಡಿದ್ದೇವೆಂದು ತೋರಿಸಿದ್ದಾರೆ. ಖಂಡಿತವಾಗಿ ಹೇಳುತ್ತೇನೆ, ಅದು ಸುಮ್ಮನೆ ಒಂದು ನಾಮಕಾವಸ್ತೆ plan sanction ಮಾಡಿಸಿಕೊಳ್ಳುವುದಕ್ಕೆ Occupation Certificate ತೆಗೆದುಕೊಳ್ಳುವುದಕ್ಕೆ ಮಾತ್ರ ತೆಗೆದುಕೊಳ್ಳುತ್ತಿದ್ದಾರೆ. ಇದನ್ನು ದೊಡ್ಡ ದೊಡ್ಡ ನಿವೇಶನಗಳಿಗೆ, ಸರ್ಕಾರದ ನಿವೇಶನಗಳಿಗೆ ಕಡ್ಡಾಯ ಮಾಡುವುದು ಸೂಕ್ತ. ಇನ್ನೊಂದು ಹೇಳುತ್ತೇನೆ, Tank Preservation Actನಲ್ಲಿ ಟ್ಯಾಂಕ್‌ಗಳನ್ನು protect ಮಾಡಿದ್ದರೆ ಈ ಹಣೆಬರಹವೇ ಬರುತ್ತಿರಲಿಲ್ಲ. ಮೊದಲು ರಾಜಾಜಿನಗರದಲ್ಲಿ ನಾವು ವಿದ್ಯಾರ್ಥಿಗಳಿದ್ದಾಗ 10 ಅಡಿಗೆ ನೀರು

ಸಿಗುತ್ತಿತ್ತು. KEB ಮೀಟರ್‌ಗಳನ್ನು ಶಿಪ್ಟ್ ಮಾಡುವ ಬಗ್ಗೆ ಹೇಳಿದ್ದಾರೆ. ಇವರು ಮಾಡಿ ಎಂದು ಹೇಳಿ ಬಿಡುತ್ತಾರೆ, KEB meter shift ಮಾಡಬೇಕಾದರೆ, ಒಳಗಡೆಯಿಂದ ಹೊರಗಡೆಗೆ KEB ಮೀಟರ್ ಶಿಪ್ಟ್ ಮಾಡಬೇಕಾದರೆ ಜನಗಳಿಗೆ ಎಷ್ಟು ಸಾವಿರ ರೂ. ಖರ್ಚಾಗುತ್ತದೆ ಎಂದು ಮಾನ್ಯ ಸುರೇಶ್ ಕುಮಾರ್‌ರವರಿಗೂ ಕೂಡ ಗೊತ್ತಿದೆ. ದೊಡ್ಡ ದೊಡ್ಡ ಕಂಪನಿಗಳವರಿಗೆ, ದೊಡ್ಡ ದೊಡ್ಡ ಶ್ರೀಮಂತರಿಗೆ ಗೊತ್ತಾಗುವುದಿಲ್ಲ. ಜನ ಸಾಮಾನ್ಯರಿಗೆ ಹೊರೆ ಆಗುತ್ತದೆ. ಇದನ್ನು ಮಾಡುವಾಗ 30x40 ಸೈಟುಗಳನ್ನು ಬಿಟ್ಟು ಉಳಿದಂತೆ 60x40 ಸೈಟುಗಳಿಗೆ ಮಾಡಲಿ. ಹಂತ ಹಂತವಾಗಿ ಮಾಡಲಿ, KMC Act ಗೆ ಅಮೆಂಡ್‌ಮೆಂಟ್ ತರಲಿ. Rain Water harvesting ನಿಜವಾಗಿಯೂ ಬೇಕು. ಬೆಂಗಳೂರು ನಗರದಲ್ಲಿ ಬೀಳುವ ಮಳೆ ನೀರನ್ನು ಸರಿಯಾಗಿ ಶೇಖರಿಸಿದರೆ ಬೆಂಗಳೂರು ನಗರಕ್ಕೆ ಎರಡು ವರ್ಷಗಳ ಕಾಲ ನೀರನ್ನು ಕೊಡಬಹುದು. ಈ ದಿಕ್ಕಿನಲ್ಲಿ ಕ್ರಮ ತೆಗೆದುಕೊಳ್ಳಬೇಕು. ಇವತ್ತು ಶಾಲೆಗಳಲ್ಲಿಯೂ rain water harvesting ಮಾಡಿದ್ದಾರೆ. ಮಾನ್ಯ ಕಾನೂನು ಸಚಿವರಿಗೂ ಗೊತ್ತಿದೆ, ಸುಮಾರು 70–80 ಸಾವಿರ ರೂ. ಖರ್ಚು ಮಾಡಿ ಸರ್ಕಾರಿ ಶಾಲೆಗಳಲ್ಲಿ ರೈನ್ ವಾಟರ್ ಹಾರ್ವೆಸ್ಟಿಂಗ್ ಮಾಡಿದ್ದಾರೆ ಯಾವುದಾದರೂ ಒಂದು ಸ್ಕೂಲ್‌ನಲ್ಲಿ ಇದು ಕೆಲಸ ಮಾಡುತ್ತಿದ್ದೆಯಾ? ಸರ್ಕಾರ ಮಳೆ ಕೊಯಿಲು ಕಾರ್ಯಕ್ರಮ ಎಂದು ಮಾಡಿದೆ. ಬಹುಶಃ ನಮ್ಮ ನಗರದ ಬಹಳಷ್ಟು ಜನ ಶಾಸಕರಿಗೆ ಗೊತ್ತಿದೆ. ಸುಮ್ಮನೆ ನಾಮಕಾವಸ್ತೆ ಮಾಡಿದ್ದಾರೆ. ದಯವಿಟ್ಟು 30x40 ಹೊರತುಪಡಿಸಿ, ಹೊಸದಾಗಿ ಕಟ್ಟುವಂತಹ ಮನೆಗಳನ್ನು KMC Act ನಲ್ಲಿ ಅಳವಡಿಸುವುದು ಸೂಕ್ತ. ಇಲ್ಲವೆಂದರೆ ಖಂಡಿತವಾಗಿಯೂ ಹೊರೆ ಆಗುತ್ತದೆ. ಜನ ಶಾಪ ಹಾಕುತ್ತಾರೆ. KEB meter ಒಳಗಡೆಯಿಂದ ಹೊರಗಡೆ ತಂದು ಹಾಕುವುದರಿಂದ ಜನಗಳಿಗೆ ಏನು ಹೊರೆ ಆಗುತ್ತಿದೆಯೋ ಅದೇ ರೀತಿ, ಖಂಡಿತವಾಗಿಯೂ ಈ ಜನರೂ ಶಾಪ ಹಾಕುತ್ತಾರೆ. ನಾಳೆ ದಿವಸ ಶಾಸಕರು ಬೀದಿಗಳಲ್ಲಿ ನಿಂತು ಜನಗಳಿಗೆ ಉತ್ತರ ಕೊಡಬೇಕಾಗುತ್ತದೆ. ಹೊಸ ಹೊಸ ಕಟ್ಟಡಗಳು ಮತ್ತು ಹೊಸ ಹೊಸ ಗೃಹ ಸಮುಚ್ಚಯ ಮಾಡುವುದಕ್ಕೆ ಕಡ್ಡಾಯ ಮಾಡಲಿ. KMC Actನಲ್ಲಿ ಅಮೆಂಡ್‌ಮೆಂಟ್ ತರಲಿ ಎಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯ ಒಂದು ವಿಧೇಯಕವನ್ನು

ನಾವು ತಂದಿದ್ದೇವೆ, ವಿಶೇಷವಾಗಿ ಮಳೆ ನೀರು ಸಂಗ್ರಹಣೆ ವ್ಯವಸ್ಥೆಯನ್ನು ಕಲ್ಪಿಸುವ ಹೊಣೆಗಾರಿಕೆ ಈ ಸಭೆಯಲ್ಲಿ ಎಲ್ಲಾರು ಇವತ್ತು ಒಪ್ಪಿಕೊಂಡಿದ್ದಾರೆ, ಇದು ಅಗತ್ಯ ಇದೆ. ಏಕೆಂದರೆ ನನ್ನ 25 ರಿಂದ 26 ವರ್ಷಗಳ ಅನುಭವ ಏನೆಂದರೆ, ನಮ್ಮೆಲ್ಲರಿಗೂ ಕೂಡ we know the price of the water, nobody knows the value of the water. ನೀರಿನ ದರ ಗೊತ್ತೇ ಹೊರತು, ನೀರಿನ ಬೆಲೆ ಗೊತ್ತಿಲ್ಲ. ನಾನು 1983ನೇ ಇಸವಿಯಲ್ಲಿ ಹೋರಾಟ ಮಾಡಿ ಬೋರ್‌ವೆಲ್ ತೋಡಿಸಿದಾಗ 150 ರಿಂದ 175 ಅಡಿಗೆ ನೀರು ಸಿಗುತ್ತಿತ್ತು. ಇವತ್ತು ಬೋರ್‌ವೆಲ್ ತೋಡಿಸಿದರೆ 700 ಅಡಿ ಕಡಿಮೆ ನೀರು ಸಿಗುವುದೇ ಇಲ್ಲ. ಈ ಪರಿಸ್ಥಿತಿಗೆ ನಾವು ಹೋಗಿದ್ದೇವೆ. ಸನ್ಮಾನ್ಯ ಸಿದ್ದರಾಮಯ್ಯನವರೇ ಇನ್ನೊಂದು ಏನಾಗಿದೆ, BWSSB ಇರಬಹುದು, ಜನಸಾಮಾನ್ಯರು ಇರಬಹುದು, ಬ್ಯಾಂಕಿನಿಂದ ದುಡ್ಡು ತೆಗೆದುಕೊಳ್ಳುತ್ತಲೇ ಇದ್ದೇವೆ. ಬ್ಯಾಂಕಿಗೆ ದುಡ್ಡು ಹಾಕುವವರು ಯಾರೂ ಇಲ್ಲ. ಇವತ್ತು ಆ ಬೋರ್‌ವೆಲ್‌ಗಳಲ್ಲಿ ನೀರಿಲ್ಲ. ಒಂದು ಜನಜಾಗೃತಿ ಉಂಟಾಗಬೇಕು, ಒಂದು ಜನಾಂದೋಲನ ಆಗಬೇಕು, ಅದು ಖಂಡಿತ ಮಾಡಬೇಕು. BWSSB ಯಿಂದಲೇ ಆ ಜನಾಂದೋಲನವನ್ನು ನಾವು ಮಾಡಿಸಬೇಕು. ಸ್ವಯಂ ಸೇವಾ ಸಂಸ್ಥೆಗಳಿಂದ ಮಾಡಿಸಬೇಕು. ಈ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಬಹಳಷ್ಟು ಯಶಸ್ವಿಯಾದ ಈ ಕಾರ್ಯಕ್ರಮ ಜಾರಿಗೆ ಬಂದಿದೆ. ನಾನು ಮಾನ್ಯ ನರೇಂದ್ರ ಬಾಬುರವರು ಹೇಳಿದಂತಹ ವಿಷಯ ಅನೇಕ ಶಾಲೆಗಳಲ್ಲಿ ಡಿಫಂಕ್ಟ್ ಆಗಿರುವುದು ಒಪ್ಪಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ನಾನು ಶಿವಕುಮಾರ್ ಎಂಬ ಒಬ್ಬ ವಿಜ್ಞಾನಿಯ ಸಾಹಸಗಾಥೆಯನ್ನು ಹೇಳಲೇಬೇಕು. ಸಾಧ್ಯವಾದರೆ ಯಾರಾದರೂ ಅವರ ಮನೆಗೆ ಹೋಗಿ ಬೇಟಿ ಮಾಡಿ. ಅವರು BWSSB water connection ತೆಗೆದುಕೊಂಡಿಲ್ಲ. ಆ ಮನೆ ಪೂರ್ತಿ ಇವತ್ತು rain water harvesting ಮೇಲೆ ಅವರು ಜೀವನ ನಡೆಸುತ್ತಿದ್ದಾರೆ. ಬಸವೇಶ್ವರ ಲೇಔಟ್‌ನಲ್ಲಿ ವಿಜಯನಗರ ಬಸ್‌ಸ್ಟ್ಯಾಂಡ್ ಹಿಂದೆ ಇದೆ. ಅವರದು ಒಂದು simple calculation. ಬೆಂಗಳೂರಿನಲ್ಲಿ ಪ್ರತಿ ವರ್ಷ 900 ಮಿ.ಮೀ. ಮಳೆ ಬಂದೇ ಬರುತ್ತದೆ. 900 ಮಿ.ಮೀ. ಮಳೆಯನ್ನು ನಮ್ಮ ನಿವೇಶನಗಳಲ್ಲಿ ಸಂಗ್ರಹಿಸಿದರೆ ವರ್ಷಪೂರ್ತಿ ಹೇಗಿರಬಹುದು ಎಂದು ಅವರು ರುಜುವಾತು ಮಾಡಿ ಅದೇ ತರಹ ಜೀವನ ನಡೆಸುತ್ತಿದ್ದಾರೆ. ಅವರದೂ BWSSB ಸಂಬಂಧ ಎಂದರೆ ಸ್ಯಾನಿಟರಿ ಕನೆಕ್ಷನ್ ಮಾತ್ರ. 60x40 ಸೈಟುಗಳ ಬಗ್ಗೆ ವಿಶೇಷವಾಗಿ ಹೇಳಿದ್ದೀರಾ 30 x 40

ಸೈಟುಗಳು ಬೇಡ, ಬಡವರಿರುತ್ತಾರೆ, ಚಿಕ್ಕ ಸೈಟು ವಠಾರಗಳಿರುತ್ತವೆ, ಚಿಕ್ಕ ಚಿಕ್ಕ ಮನೆಗಳು ಇರುತ್ತವೆ ಎಂದು ಹೇಳಿದ್ದೀರಿ, ಅದನ್ನು ಸಂಬಂಧಪಟ್ಟ ಸಚಿವರು ಉತ್ತರ ಕೊಡುವಾಗ ಹೇಳುತ್ತಾರೆ. ಪ್ರಶ್ನೆ ಇರುವುದು ಮಾನ್ಯ ದಿನೇಶ್ ಗುಂಡೂರಾವ್ ಅವರದು. ಮಾನ್ಯ ದಿನೇಶ್ ಗುಂಡೂರಾವ್‌ರವರು ಚೆನ್ನೈ ಬಗ್ಗೆ ಒಂದು ಉದಾಹರಣೆ ಕೊಟ್ಟರು. ನಮ್ಮಲ್ಲಿ ಕೂಡ ಬಿ.ಬಿ.ಎಂ.ಪಿ. ಯಲ್ಲಿ ಹೊಸದಾಗಿ ಪ್ಲಾನ್ ಮಾಡುವಾಗ. We are insisting ನೀವು rain water harvesting. ನೀವು ಮಾಡಬೇಕೆಂದು, unfortunately, there is on provision ಅದಕ್ಕೋಸ್ಕರ ತಾವೆಲ್ಲ ಹೇಳಿರುವಂಥದ್ದನ್ನು ಗಮನದಲ್ಲಿಟ್ಟುಕೊಂಡು KMC Act ಮತ್ತು ಪುರಸಭೆಗಳ Act ನಲ್ಲಿ ಸೂಕ್ತವಾದ ಒಂದು Amendment ತಂದು ಇಡೀ ರಾಜ್ಯದಲ್ಲಿ ಇದು ಜಾರಿಗೆ ಬರುವ ವ್ಯವಸ್ಥೆಯನ್ನು ನಾವು ಮುಂದಿನ ಅಧಿವೇಶನದಲ್ಲಿ ಇಡುತ್ತೇವೆ. ಆದರೆ ಇವತ್ತು ಬೆಂಗಳೂರಿನಲ್ಲಿ BWSSB ಯದ್ದು responsibility ಇದೆ, ಅವರು ನೀರನ್ನು ಕೊಡಬೇಕು, ನೀರು ಕೊಡುವಾಗ ಕಡೆಯ ಪಕ್ಷ ಬೋರ್‌ವೆಲ್ ಮುಖಾಂತರವಾದರೂ ನೀರನ್ನು ಕೊಡಿ ಎಂದು ಹೇಳುತ್ತಾರೆ, ಆದರೆ ಬೋರ್‌ವೆಲ್‌ಗಳಲ್ಲಿ ನೀರಿಲ್ಲ. ಅದಕ್ಕೋಸ್ಕರ ಇವತ್ತು ಈ amendment ಏನು ತಂದಿದ್ದೇವೆ, ಇದು ಬಹಳ ಸೀಮಿತವಾಗಿ BWSSB ಯ ವ್ಯಾಪಕ ಪ್ರದೇಶಕ್ಕೆ ಪೂರಕವಾಗಿ ಇದೆ. ಆದುದರಿಂದ ಇದಕ್ಕೆ ದಯವಿಟ್ಟು ಅನುಮೋದನೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ದಿನೇಶ್ ಗುಂಡುರಾವ್: ಮಾನ್ಯ ಸಚಿವರೆ, ಈಗ ಮತ್ತೆ ತಾವು KMC ವ್ಯಾಪ್ತಿಯಲ್ಲಿ amendment ಮಾಡಿ ಅದು ಈ ಒಂದು amendment ಅನ್ನು override ಮಾಡಿ ಅದೆಲ್ಲವೂ confusion ಆಗುವ ಬದಲು ತಾವು ಇದರ ಬಗ್ಗೆ ಎಲ್ಲ ಅಂಶಗಳನ್ನು ಸಮಗ್ರವಾಗಿ ಆಲೋಚನೆ ಮಾಡಿ ಒಂದೇ ಬಾರಿಗೆ ಬಿಲ್ ಅನ್ನು ತೆಗೆದುಕೊಂಡು ಬನ್ನಿ. ಒಂದು ಬಾರಿ ಇದನ್ನು ತಂದು, ಇನ್ನೊಂದು ಸಾರಿ ಅದನ್ನು ತಂದರೆ ಯಾರು ಇದನ್ನು ಇಂಪ್ಲಿಮೆಂಟ್ ಮಾಡುವವರು? ಜಲಮಂಡಳಿಯವರು ಮಾಡುತ್ತಾರೋ, ಮುನಿಸಿಪಾಲಿಟಿಯವರು ಮಾಡುತ್ತಾರೋ, ಯಾರು ಮಾಡುತ್ತಾರೆ? ಈ ರೀತಿಯ confusion ಅನ್ನು ನೀವು ಏಕೆ create ಮಾಡುತ್ತೀರಿ? ಈಗ ಇವರು ಶುರು ಮಾಡಿಕೊಂಡು ಅರ್ಧಂಬರ್ಧ ಮಾಡಿ ಬಿಟ್ಟು ಬಿಡುತ್ತಾರೆ. ನಾಳೆ ಅವರು ಬರುತ್ತಾರೆ, ಅವರು ಬಂದು ಅವರ ಕೆಲಸವನ್ನು ಶುರು ಮಾಡಿಕೊಳ್ಳುತ್ತಾರೆ. ಏಕೆ ಈ ರೀತಿಯ

confusion ಅನ್ನು ಮಾಡಿಕೊಳ್ಳುತ್ತೀರಿ. ಯಾವುದಾದರೂ ಒಂದು agency ಯನ್ನು ನೀವು fix ಮಾಡಿ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಉಪಾಧ್ಯಕ್ಷರೆ, ಈ ಒಂದು Act ನಂತೆ ಈ Bill pass ಆದರೂ ಕೂಡ ಆದ 9 ತಿಂಗಳೊಳಗೆ ಎಂದು ನೀವು time ಕೊಟ್ಟಿದ್ದೀರಿ. ಇದು ಸೀಮಿತವಾಗಿರತಕ್ಕಂಥದ್ದು. BWSSB ಯವರು ಇದನ್ನು monitor ಮಾಡತಕ್ಕಂಥದ್ದು. ಈಗ ಮಾನ್ಯ ನಾಡಗೌಡರು ಮತ್ತು ಮಾನ್ಯ ದಿನೇಶ್ ಗುಂಡುರಾವ್‌ರವರು ಕೊಟ್ಟಿರುವ ಸಲಹೆಗಳು ಸೂಕ್ತವಾದವುಗಳೇ ಆಗಿವೆ. ಅವರು ಹೇಳಿದಂತೆ ಸಮಗ್ರವಾಗಿ ಆಲೋಚನೆ ಮಾಡಿ ಬಿಲ್ ಅನ್ನು ತೆಗೆದುಕೊಂಡು ಬನ್ನಿ. ಈಗ ಇಡೀ BBMPಗೆ ಸೇರಿದಂತೆ ಅವರು ಹೊಸದಾಗಿ ಮಾಡುತ್ತಾರೆ. ಹೊಸದಾಗಿ ಮಾಡಬೇಕಾದರೆ ನಿಮ್ಮ ಪ್ಲಾನ್ ತೆಗೆದುಕೊಳ್ಳಬೇಕಾಗುತ್ತದೆ, ಮತ್ತೆ 30x40ಕ್ಕೆ ಸೀಮಿತವಾಗಿದ್ದರೆ ಬಹಳ ತೊಂದರೆಯೂ ಕೂಡ ಆಗುತ್ತದೆ ಎಂದೂ ಕೂಡ ಹೇಳುತ್ತಾರೆ. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು comprehensive ಆಗಿ ಒಂದು Bill ಅನ್ನು ತೆಗೆದುಕೊಂಡು ಬನ್ನಿ. ಏಕೆಂದರೆ ಇದು ತಕ್ಷಣ ನಾಳೆಯೇ ಇಂಪ್ಲಿಮೆಂಟ್ ಏನೂ ಆಗುವುದಿಲ್ಲ. ಇದು ಜಾರಿಗೆ ಬಂದ ಮೇಲೆ 9 ತಿಂಗಳೊಳಗೆ ಮಾಡಿಕೊಳ್ಳಬೇಕು ಎಂದು ಹೇಳಿರುವುದು. ಆದುದರಿಂದ ಮುಂದಿನ ಅಧಿವೇಶನದಲ್ಲಿ comprehensive ಆಗಿ Bill ತೆಗೆದುಕೊಂಡು ಬನ್ನಿ. ಚರ್ಚೆ ಮಾಡಿ ಅದನ್ನು ಪಾಸ್ ಮಾಡಿಕೊಡೋಣ. ಇದು ಎಲ್ಲರಿಗೂ ಅನುಕೂಲವಾಗುತ್ತದೆ. ಇದಲ್ಲದೇ ಚೆನ್ನೈದು ಏನಿದೆ ಅದನ್ನು ಕೂಡ ತೆಗೆದುಕೊಂಡು ಬನ್ನಿ. ಅದನ್ನೂ ಕೂಡ ಸ್ಟಡಿ ಮಾಡೋಣ.

ಶ್ರೀ ಟಿ.ಬಿ. ಜಯಚಂದ್ರ: ಅದನ್ನೂ ಕೂಡ ನೀವು ಸ್ಟಡಿ ಮಾಡಿ. ನೀವು ಮುಂದೆ ಅಧಿವೇಶನವನ್ನು ಯಾವಾಗ ಕರೆಯುತ್ತೇವೆಯೋ, ಏನು ಕಥೆಯೋ ಎಂದು ಇದ್ದರೆ...

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಆ ರೀತಿ ಏನು ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ: ನೀವು ನಾನು ಹೇಳುವುದನ್ನು ಕೇಳಿ. ಇನ್ನು ನಾಲ್ಕು ದಿವಸ ಮಾತ್ರ ಸೆಶನ್ ಇದೆ. ಅಷ್ಟರೊಳಗೆ ಈ ಬಿಲ್ ತರುವುದಕ್ಕೆ ಆಗುವುದಿಲ್ಲವೆನ್ನುವ ಭಾವನೆ ಇರಬಹುದು. ನೀವು ಬೇಕಾದರೆ Ordinance ತನ್ನಿ. ನಮ್ಮೆಲ್ಲರ ಏನು ಸಲಹೆ ಇದೆ, ಅಭಿಪ್ರಾಯವಿದೆ ಅದನ್ನು ಅಳವಡಿಸಿಕೊಂಡು ನೀವು Ordinance ತಂದರೆ ನಾವು next time pass

ಮಾಡುವುದಕ್ಕೂ ಕೂಡ ಅನುಕೂಲವಾಗುತ್ತದೆ. ಏಕೆಂದರೆ ತಾತ್ವಿಕವಾಗಿ ಇದಕ್ಕೆ ಯಾರ ವಿರೋಧವೂ ಇಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಈಗೇನು ನಮ್ಮ ವಿರೋಧ ಪಕ್ಷದ ನಾಯಕರು, ಜಯಚಂದ್ರರವರು, ದಿನೇಶ್ ಗುಂಡೂರಾವ್‌ರವರು ಮತ್ತು ನರೇಂದ್ರಬಾಬುರವರು, ನಾಡಗೌಡರು ಮತ್ತು ಶಿವಕುಮಾರ್‌ರವರು, ಇವರೆಲ್ಲರೂ ಕೂಡ ಅವರ ಸಲಹೆಗಳನ್ನು ಕೊಟ್ಟಿದ್ದಾರೆ. ಈಗ community harvesting ಅನ್ನು ಮಾಡಬೇಕೆಂದು ಮಾನ್ಯ ನಾಡಗೌಡರು ಸಲಹೆಯನ್ನು ಕೊಟ್ಟರು. ಖಂಡಿತವಾಗಿ ಅದರ ಬಗ್ಗೆ ನಾವು provision ಮಾಡಿಕೊಳ್ಳುತ್ತೇವೆ. ಇನ್ನು ಎರಡನೆಯದಾಗಿ 30x40 ನಿವೇಶನದಲ್ಲಿ ಕಷ್ಟವಾಗುತ್ತದೆ, ಅದರ ಮೇಲ್ಪಟ್ಟ ವಿಸ್ತೀರ್ಣದ ಮನೆಗಳಿಗೆ ಮಾತ್ರ ಇದನ್ನು ಅಳವಡಿಸಬೇಕೆಂದು ಈಗ ತಾವೇನು ಹೇಳಿದಿರಿ ಅದರ ಬಗ್ಗೆ ಕೂಡ ನೋಡಬಹುದು. 30x40 ರದ್ದನ್ನು ಬಿಟ್ಟು 40x60 ರಿಂದ ಬೇಕಾದರೆ ಅದನ್ನು ಅಳವಡಿಸೋಣ. ಅದಕ್ಕೇನೂ ತೊಂದರೆಯಿಲ್ಲ. ಆದರೆ ಜಾಸ್ತಿ ಮನೆಗಳಿಗೆ ಇದನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈಗ at least 1200 ಅಡಿಗಿಂತ ಮೇಲ್ಪಟ್ಟು ಎಂದು, ಅಂದರೆ 30x40 ಹೊರತುಪಡಿಸಿ ಅದಕ್ಕೆ ಮೇಲ್ಪಟ್ಟಂಥವುಗಳಿಗಾದರೂ ನಾವು ಏನಾದರೂ ಮಾಡಿಕೊಳ್ಳದೇ ಹೋದರೆ.

ಶ್ರೀ ಸಿದ್ದರಾಮಯ್ಯ: ನೀವು ಬೆಂಗಳೂರು ನಗರದಲ್ಲಿ ವಾಸ ಮಾಡುವವರು. 30 x 40 ರದ್ದನ್ನು ಬಿಟ್ಟು 32x42ಕ್ಕೆ ಮಾಡುತ್ತೀರ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಆಯಿತು, ಈಗೇನು ಬೇಡವೇ, ನಾನು ಹೇಳುವುದೇನೆಂದರೆ ಎಲ್ಲರಿಗೂ ಬೇಕಾಗಿರುವಂಥ ವಿಚಾರ ಇದಾಗಿದೆ. ಇದನ್ನೇನೂ ಪ್ರತಿಷ್ಠೆ ವಿಚಾರ.

ಶ್ರೀ ಸಿದ್ದರಾಮಯ್ಯ: ಇದರಲ್ಲಿ ಪ್ರತಿಷ್ಠೆ ಎನ್ನುವುದು ಇಲ್ಲ. ನಿಮ್ಮ principle ಏನಿದೆ ಅದರ ಬಗ್ಗೆ ತಾತ್ವಿಕವಾಗಿ ಎಲ್ಲರ ಒಪ್ಪಿಗೆ ಇದೆ.

ಡಾ: ಸಿ.ಎನ್. ಅಶ್ವಥ್ ನಾರಾಯಣ್ (ಮಲ್ಲೇಶ್ವರಂ): ಮಾನ್ಯ ಸಚಿವರೆ, rain water harvest ನಲ್ಲಿ ನಾವು 30x40 site ಬಿಟ್ಟರೆ, ಅಂದರೆ 60% ಮನೆಗಳನ್ನು ನಾವು ಬಿಟ್ಟರೆ ಯಾವ ರೀತಿಯಾಗಿ ನೀರನ್ನು ಹಿಡಿದಿಟ್ಟುಕೊಳ್ಳುವುದಕ್ಕಾಗುತ್ತದೆ. ನೀರು ಇಂದು ಅಮೂಲ್ಯವಾದುದು.

ಬೆಂಗಳೂರು ನಗರ ಇವತ್ತು ಉಳಿಯಬೇಕೆಂದರೆ ಪ್ರತಿಯೊಂದು ಮನೆಯಲ್ಲಿಯೂ ಕೂಡ ಇದರ ಬಗ್ಗೆ ಜವಾಬ್ದಾರಿ ಇರಬೇಕಾಗುತ್ತದೆ. 30x40ರಲ್ಲಿ ಅಳವಡಿಸುವುದಕ್ಕೆ ಆಗುವುದಿಲ್ಲವೆಂದಲ್ಲ, ಅಳವಡಿಸುವುದಕ್ಕೆ ಸಾಧ್ಯವಿದೆ. ಇದು ಬಹಳ ಅಗತ್ಯವೂ ಕೂಡ ಇದೆ. ಆದುದರಿಂದ 30x40 ಸೈಟಿನಲ್ಲಿಯೂ ಕೂಡ ಇದನ್ನು ಅಳವಡಿಸಿ ನಾಗರಿಕರಿಗೆ ನೀರು ಸರಬರಾಜಾಗಬೇಕು. ಏಕೆಂದರೆ ಈ ರೀತಿ ಮಾಡದಿದ್ದರೆ ಮುಂದಿನ ದಿನಗಳಲ್ಲಿ it will be dieing city. ಖಂಡಿತವಾಗಿಯೂ ಬೆಂಗಳೂರು ನಗರಕ್ಕೆ ಉಳಿಗಾಲವಿಲ್ಲ. Sympathizing ಎಂದು ಏನು ಹೇಳುತ್ತೇವೆಯೋ ಇದು sympathizing ಅಲ್ಲ, ಇವರಿಗೆ ಮಾರಕವಾದಂಥದ್ದನ್ನು ನಾವು suggestion ಕೊಡುತ್ತಿದ್ದೇವೆ. ದಯವಿಟ್ಟು 30 x 40 ರದ್ದನ್ನು ಕೂಡ ಈ Bill ನಲ್ಲಿ ಅಳವಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದು ಉತ್ತಮವಾದಂಥ ಕಾಯಿದೆಯಾಗಿದೆ. ನೀವು comprehensive ಆಗಿ Ordinance ಮುಖಾಂತರ ಬೇಕಾದರೂ ನೀವು ಇದನ್ನು ಮಾಡಬಹುದು. ಆದರೆ ಈ ಒಂದು ಕಾಯ್ದೆಯಲ್ಲಿ 30 x 40ರದ್ದನ್ನು involve ಮಾಡಿ ಖಂಡಿತವಾಗಿ ಕಾಯ್ದೆಯನ್ನು ತರಬೇಕು. ಇದಲ್ಲದೇ ನಾವು ಬಿ.ಬಿ.ಎಂ.ಪಿ.ಯಲ್ಲಿ ಮಾಡುವಂಥ ಡ್ರೈನ್ಸ್ ಏನಿದೆಯೋ ಆ ಡ್ರೈನ್ಸ್‌ನಲ್ಲಿಯೂ ಕೂಡ ಒಂದು method develop ಮಾಡಿ ನಾವು ಮಾಡುವಂಥ ಡ್ರೈನ್ಸ್‌ನಲ್ಲಿಯೂ ಕೂಡ rain water harvest ಆಗಬೇಕು. ಆದರೆ ಇಂದು ಈ drains ನಲ್ಲಿಯೂ ಕೂಡ ಈ ಯೋಜನೆಯನ್ನು ತಂದಿಲ್ಲ. ನಾವು ಬಿ.ಬಿ.ಎಂ.ಪಿ.ಯಲ್ಲಿ ಮಾಡುವಂಥ ಚರಂಡಿ ಕಾಮಗಾರಿಯಲ್ಲಿಯೂ ಕೂಡ ಈ ಒಂದು rain water harvest ಮಾಡುವಂಥ techniques involve ಮಾಡಬೇಕೆಂದು ಹೇಳಿ ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಮಾನ್ಯ ಅಧ್ಯಕ್ಷರೆ, ಈಗ ಸದ್ಯಕ್ಕೆ ನಾವು 30x40 ರದ್ದನ್ನು ಕೈಬಿಟ್ಟು ಮುಂದೆ ಏನು ನಾವು amendment ಅನ್ನು ಬೇರೆ ರೂಪದಲ್ಲಿ ತರುವುದಕ್ಕೆ ನಾವು ಯೋಚನೆಯನ್ನು ಮಾಡಿದ್ದೇವೆಯೋ, ಆಗ ಸಮಗ್ರವಾಗಿ ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತೆ ಬಿಲ್ ಅನ್ನು ತರೋಣ. ಅದು ಇಡೀ ರಾಜ್ಯಕ್ಕೇ ಸೀಮಿತವಾಗುತ್ತದೆ. ಆದರೆ ಇವತ್ತು ಎಷ್ಟು ಜನಸಂಖ್ಯೆ, ಎಷ್ಟು ಮನೆಗಳು BWSSB ವ್ಯಾಪ್ತಿಯಲ್ಲಿ ಬರುತ್ತದೆ ಎಂಬುದು ತಮಗೆಲ್ಲರಿಗೂ ಗೊತ್ತಿದೆ. ದೊಡ್ಡ ಜವಾಬ್ದಾರಿ ಇದೆ. ಈಗ ಮಾನ್ಯ ಸಿದ್ದರಾಮಯ್ಯನವರು

ಮಾತನಾಡುವಾಗ ಈ ವಿಚಾರ ಎಲ್ಲರಿಗೂ ತಿಳಿಯಬೇಕು, ನಾವು ಏಕ್‌ದಂ ಜನರ ಮೇಲೆ ಇದನ್ನು ಹೇರಬಾರದು ಎಂದು ಹೇಳಿದರು. ನಾವು ಈಗಾಗಲೇ ಈ ಬಗ್ಗೆ ವಿವರವನ್ನೊಳಗೊಂಡಂತೆ ಪುಸ್ತಕವನ್ನು ಮುದ್ರಣ ಮಾಡಿಸಿ ಹಂಚಿದ್ದೇವೆ. ಪತ್ರಿಕೆಗಳಲ್ಲಿಯೂ ಕೂಡ ಈ ಬಗ್ಗೆ ಜಾಹಿರಾತನ್ನು ಕೊಟ್ಟಿದ್ದೇವೆ ಮತ್ತು ಒಂದು ಥೀಮ್ ಪಾಕ್‌ನ್ನು ಕೂಡ ಜಯನಗರದಲ್ಲಿ ಮಾಡುತ್ತಿದ್ದೇವೆ. ಆ ಥೀಮ್ ಪಾರ್ಕ್‌ನಲ್ಲಿ ಮಳೆ ನೀರನ್ನು ಯಾವ ರೀತಿಯಾಗಿ ಸಂಗ್ರಹಣೆ ಮಾಡಬಹುದು ಎನ್ನುವುದರ ಬಗ್ಗೆ ಪೂರ್ತಿ ವಿವರಗಳನ್ನು ಡಿಸ್‌ಪ್ಲೇ ಮಾಡುವಂಥದ್ದು ಇದೆ. ಈಗ ಥೀಮ್ ಪಾರ್ಕ್ ಕೆಲಸ ಪ್ರಾರಂಭವಾಗಿದ್ದು ಅದು ಇನ್ನು 6 ತಿಂಗಳಲ್ಲಿ ಅದರ ಕೆಲಸ ಪೂರ್ಣವಾಗುತ್ತದೆ. ಆ ಜಾಗದಲ್ಲಿ ಎಲ್ಲರೂ ಕೂಡ ಹೊಸದಾಗಿ ಕಟ್ಟಡವನ್ನು ಕಟ್ಟುವಂಥವರು ಅದನ್ನು ನೋಡಿಕೊಳ್ಳಲೂಬಹುದು ಮತ್ತು ನಾವು ಈಗಾಗಲೇ ಈ ಬಗ್ಗೆ ಕೆಲವು ಪುಸ್ತಕಗಳನ್ನೂ ಕೂಡ ಮುದ್ರಣ ಮಾಡಿದ್ದೇವೆ, ಯಾವ ರೀತಿಯಾಗಿ ಮಳೆ ಕೊಯ್ಲು ಪದ್ಧತಿಯನ್ನು ಅಳವಡಿಸಿಕೊಳ್ಳಬಹುದು ಎಂದು ಅದರಲ್ಲಿದೆ. ಹೀಗಾಗಿ ಇವತ್ತು 30x40 ಸೈಟನ್ನು ಬಿಟ್ಟು 40x60 ಮತ್ತು ಅದರ ಮೇಲ್ಪಟ್ಟಂಥ ಎಲ್ಲ ಸೈಟ್‌ಗಳಿಗೆ ನಾವು ಇದನ್ನು ಕಡ್ಡಾಯಗೊಳಿಸುವುದು ಅನಿವಾರ್ಯವಾಗಿದೆ. ಇದನ್ನು ಜಾರಿಗೆ ತರೋಣ. ಇನ್ನು community harvesting ಅನ್ನು ಸಣ್ಣ ಸಣ್ಣ slum ಪ್ರದೇಶಗಳಲ್ಲಿ, 30x40 commercial place ಗಳಲ್ಲಿ ಈ ಮಳೆ ನೀರನ್ನು ಸಂಗ್ರಹ ಮಾಡಿ ಎಲ್ಲಿಂದ ಎಲ್ಲಿಗೆ ತೆಗೆದುಕೊಂಡು ಹೋಗಿ ಬಿಡಬಹುದು ಎನ್ನುವುದರ ಬಗ್ಗೆ ಕೂಡ ಅಮೂಲಾಗ್ರವಾಗಿ ನಾವು ಪ್ಲಾನ್ ಮಾಡುತ್ತೇವೆ. ಹೀಗಾಗಿ ಈ Bill ಅನ್ನು ದಯವಿಟ್ಟು ತಾವು ಪಾಸ್ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ: ತಾವು ಎಲ್ಲರ ಪ್ರಶ್ನೆಗಳಿಗೆ ಉತ್ತರ ಕೊಟ್ಟಿರಿ. ಆದರೆ De-notification ಬಗ್ಗೆ ಏನನ್ನೂ ಹೇಳಲೇ ಇಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಸೆಪರೇಟ್ ಆಗಿ ಆ ಸಬ್ಜೆಕ್ಟ್ ಬಂದಾಗ ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ: ಆಯಿತು.

ಶ್ರೀ ನೆ.ಲ. ನರೇಂದ್ರ ಬಾಬು: ಈಗ ಹಳೆಯ 30 x 40 ಮನೆಗಳಲ್ಲಿ Roof top rain water harvesting ಮಾಡಬೇಕಾದರೆ ಎಷ್ಟು ಕಠಿಣವಾಗುತ್ತದೆಂದು ಅಶ್ವತ್ಥ್ ನಾರಾಯಣ್‌ರವರಿಗೂ ಗೊತ್ತಿದೆ. ಆದರೆ ಅವರು ಒಂದು ಒಳ್ಳೆಯ

ಸಲಹೆಯನ್ನು ಕೊಟ್ಟಿದ್ದಾರೆ, storm water drainಗಳಲ್ಲಿ re-charge cells ಮಾಡಿ ಎಂದು ಹೇಳಿದರು. ಆ ರೀತಿ CMC Act ನಲ್ಲಿ ಮಾಡಿದರೆ ಬಹುಶಃ ಒಳ್ಳೆಯದಾಗುತ್ತದೆ. ಇವತ್ತು ತಮಗೆ ಗೊತ್ತಿರಬಹುದು, ಹೆಲ್ಮೆಟ್ ಕಡ್ಡಾಯ ಎಂದ ತಕ್ಷಣ ಯಾರಿಗೋ ವ್ಯಾಪಾರವಾಗುತ್ತದೆ, ಅದೇ ರೀತಿ ಮೀಟರ್ ಹೊರಗಡೆ ಹಾಕಬೇಕು ಎಂದರೆ ಯಾರಿಗೋ ಲಾಭವಾಗುತ್ತದೆ, ಆದುದರಿಂದ 9 ತಿಂಗಳೊಳಗೆ ಇದು ಕಡ್ಡಾಯವೆಂದರೆ ಇದು ಬಹಳ ಕಠಿಣವಾಗುತ್ತದೆ. ಆದುದರಿಂದ KMC Act ನಲ್ಲಿ ಇದನ್ನು ಅಳವಡಿಸಿ ತರುವುದು ಸೂಕ್ತ. ಇಲ್ಲವೆಂದರೆ, ಯಾವ ಯಾವ ಕಂಪನಿಗಳವರು 5 ಸಾವಿರ ರೂಪಾಯಿಗೆ ಮಾರುತ್ತಿದ್ದದ್ದನ್ನು 20 ಸಾವಿರ ರೂಪಾಯಿಗೆ ಮಾರುತ್ತಾನೆ. ಏಕೆಂದರೆ 9 ತಿಂಗಳೊಳಗೆ ಕಡ್ಡಾಯವೆಂದು ಮಾಡಿದಾಗ ಈ ರೀತಿಯಾಗುತ್ತದೆ. ಇದರಿಂದ ಸಾಮಾನ್ಯ ಜನರಿಗೆ ಹೊರಯಾಗುತ್ತದೆ.

ಶ್ರೀ ದಿನೇಶ್ ಗುಂಡುರಾವ್: ಸಮಗ್ರವಾಗಿ ಯೋಚನೆ ಮಾಡಿ ಮುಂದೆ ಈ ಬಿಲ್ ತೆಗೆದುಕೊಂಡು ಬರಲಿ. ಈಗಲೇ ತರಬೇಕೆಂದು ಈ ವಿಚಾರದಲ್ಲಿ ಪ್ರತಿಷ್ಠೆ ಮಾಡಿಕೊಳ್ಳುತ್ತಾರೆ?

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಕಟ್ಟಡಗಳಿಗೆ 30 x 40ಕ್ಕೂ ಅನುಷ್ಠಾನ ವಾಗುವ ಹಾಗೆ ನಾವು ಕಡ್ಡಾಯ ಮಾಡುತ್ತೇವೆ.

ಶ್ರೀ ದಿನೇಶ್ ಗುಂಡೂರಾವ್: ಮಾನ್ಯ ಸಚಿವರೆ, ನಾವು ಹೇಳುವುದನ್ನು ಕೇಳುವುದಕ್ಕೂ ನೀವು ತಯಾರಿಲ್ಲವಲ್ಲ. ನಾವು ನಿಮ್ಮ ಪರವಾಗಿಯೇ ಇದ್ದೇವೆ. ಸಮಸ್ಯೆ ಬಗ್ಗೆ ನಮಗೆ ಅರ್ಥವಾಗುತ್ತದೆ. ನಾವೆಲ್ಲರೂ ಕೂಡ ಪ್ರಗತಿಪರ ರೀತಿಯಲ್ಲಿಯೇ ಯೋಚನೆಯನ್ನು ಮಾಡುತ್ತಿದ್ದೇವೆ. ಆದುದರಿಂದ ನಾವು ನಿಮಗೆ ಸಹಕಾರವನ್ನು ನೀಡುತ್ತೇವೆ. ಆದರೆ ನೀವು ಈ ಬಿಲ್ ಅನ್ನು ಸರಿಯಾದ ರೀತಿಯಲ್ಲಿ ತೆಗೆದುಕೊಂಡು ಬನ್ನಿ ಎಂದು ನಾವು ನಿಮಗೆ ಹೇಳುತ್ತಿರುವುದು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಅದನ್ನು ಮಾಡುವುದಕ್ಕೆ ನನ್ನದೇನೂ ಅಡ್ಡಿಯಿಲ್ಲ. ಮಾನ್ಯ ಉಪಾಧ್ಯಕ್ಷರೆ, ನಾವು ಇವತ್ತು ಈ ಬಿಲ್ ಅನ್ನು ಏನು ತಂದಿದ್ದೇವೆ ಹೊಸದಾಗಿ ಮನೆಯನ್ನು ಕಟ್ಟಲು ಪ್ಲಾನ್ ಸ್ಯಾಂಕ್ಷನ್‌ಗೆ ಏನು ಕೇಳಿರುತ್ತಾರೋ ಅದಕ್ಕೂ ಕೂಡ ಇದನ್ನು ಅಳವಡಿಸಿ ಕಡ್ಡಾಯಗೊಳಿಸುತ್ತೇವೆ. ಹಳೆ ಕಟ್ಟಡಗಳಲ್ಲಿ 30x40 ರದ್ದನ್ನು ಬಿಟ್ಟು ಹೊದ ಕಟ್ಟಡಗಳಿಗೆ

ಅಳವಡಿಸುತ್ತೇವೆಂದು ಹೇಳಿ ದಯವಿಟ್ಟು ಈ ಬಿಲ್ ಅನ್ನು ಪಾಸ್ ಮಾಡಿಕೊಡಬೇಕೆಂದು ಕೇಳುತ್ತಿದ್ದೇನೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ (ತಿದ್ದುಪಡಿ) ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಅಬಕಾರಿ, ಪಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, 2009ರ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ (ತಿದ್ದುಪಡಿ) ವಿಧೇಯಕ, 2009

ಶ್ರೀ ಸಿದ್ದರಾಮಯ್ಯ: 60x40 and above ಎಂದು ಮಾಡಿ.

ಉಪಾಧ್ಯಕ್ಷರು: ಅದನ್ನೇ ಹೇಳಿದ್ದಾರೆ. ಪ್ರಸ್ತಾವ ಏನೆಂದರೆ,

"ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಶ್ರೀ ಸಿದ್ದರಾಮಯ್ಯ: ಮಾನ್ಯ ಉಪಾಧ್ಯಕ್ಷರೇ, amendment move ಮಾಡುವುದಕ್ಕೆ ಹೇಳಿ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು: ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ನಿರ್ಮಾಣಗೊಂಡಿರುವ 30x40 ಹಳೇ sites ಹೊರತುಪಡಿಸಿ ಇನ್ನು ಮುಂದೆ 30x40 ಹೊಸ ಕಟ್ಟಡಗಳಿಗೆ ಹಾಗೂ 60x40 ಸೈಟುಗಳಿಗೆ ಮತ್ತು ಅದಕ್ಕೆ ಮೇಲ್ಪಟ್ಟ ಎಲ್ಲಾ ಸೈಟುಗಳಿಗೆ ಕೂಡ including commercial and industrial sites ಎಲ್ಲಾ ಸೇರಿದಂತೆ ತಿದ್ದುಪಡಿಯನ್ನು ತರುತ್ತಿದ್ದೇನೆ.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಉಪಾಧ್ಯಕ್ಷರು: 2ನೇ ಖಂಡವು ಪ್ರಸ್ತಾವನೆ ಮಾಡಿದ ತಿದ್ದುಪಡಿಯೊಂದಿಗೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ತಿದ್ದುಪಡಿಯೊಂದಿಗೆ ಈ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತವೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ಹೆಸರು ಮತ್ತು ಅವರತಣಿಕೆ ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಅಬಕಾರಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ (ತಿದ್ದುಪಡಿ) ವಿಧೇಯಕ, 2009 ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ,

"ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ (ತಿದ್ದುಪಡಿ) ವಿಧೇಯಕ, 2009ವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ತಿದ್ದುಪಡಿಯೊಂದಿಗೆ ಒಪ್ಪಿಗೆ ನೀಡಲಾಯಿತು

(ಅನುಬಂಧ–5)

ಉಪಾಧ್ಯಕ್ಷರು: ಈಗ ವಿತ್ತೀಯ ಕಾರ್ಯಕಲಾಪಗಳು. 2009–10ನೇ ಸಾಲಿನ ಈ ಕೆಳಕಂಡ ಅನುದಾನ ಬೇಡಿಕೆಗಳ ಮೇಲೆ ಚರ್ಚೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ: ಮಾನ್ಯ ಉಪಾಧ್ಯಕ್ಷರೇ, ಇವತ್ತು ಅರ್ಧ ಗಂಟೆ ವಿಶೇಷ ಚರ್ಚೆಗೆ ಅನುಮತಿ ಕೊಡಿ.

ಉಪಾಧ್ಯಕ್ಷರು: ಆಮೇಲೆ ಅದನ್ನು ತೆಗೆದುಕೊಳ್ಳೋಣ. ಈಗ ನಾನು ಓದಿದ್ದೇನೆ, ನೀವು ಮಾತನಾಡುವುದಕ್ಕೆ ಅನುಮತಿಯನ್ನು ತೆಗೆದುಕೊಳ್ಳುವುದಿಲ್ಲ. ಎದ್ದು ನಿಂತು ಮಾತನಾಡುತ್ತೀರಿ. ದಯವಿಟ್ಟು ಕುಳಿತುಕೊಳ್ಳಿ.